ಅಷ್ಟು ಶ್ರಮದಿಂದ ಕೆಲಸ ಮಾಡಿದ್ದಾರೆ. ಸರ್ಕಾರ ಎಲ್ಲವನ್ನೂ ಗಮನಿಸಿದೆ ; ಮುಂದೆ ಈ ರೀತಿ ಆಗದ ಹಾಗೆ ಸರ್ವ ಪ್ರಯತ್ನವನ್ನೂ ಮಾಡೋಣ. ತಿರುಪತಿಗೆ, ಮಂತ್ರಾಲಯಕ್ಕೆ ಹೋಗುವಾಗ ಬಸ್ಸು ಬಿದ್ದು ಸಾಯುತ್ತಾರೆ ; ವಿಮಾನ ಹೋಗುವಾಗ ಬಿದ್ದು ಹೋಗುತ್ತೆ, ರೈಲು ಹೋಗುವಾಗ ಬಿದ್ದು ಸಾಯುತ್ತಾರೆ. ಇನ್ನು ಮುಂದೆ ಈ ರೀತಿ ಆಗುವುದಿಲ್ಲವೆಂದು ನಾನು ಭರವಸೆ ಕೊಡುವುದಕ್ಕೆ ದೇವರಲ್ಲ ; ವಸಿಷ್ಠ, ವಿಶ್ವಾಮಿತ್ರರಲ್ಲ. ಸಮಾಜದಲ್ಲಿರತಕ್ಕ ಸಮಾಜ ಸುಧಾರಕರು, ಕಾರ್ಯಕರ್ತರು, ಸಿಕ್ಕಿಸಿಕ್ಕಿದ ಕಡೆಯಲ್ಲಿ ಕಂಡಕಂಡಲ್ಲಿ ಕಳ್ಳಭಟ್ಟಿ ಕುಡಿಯಬೇಡಿ ಎಂದು ಬುದ್ಧಿ ಹೇಳಿ ; ಮನುಷ್ಯ ಪ್ರಯತ್ನ ಮೀರಿ ನಡೆದರೆ ನಾವು, ನೀವು ಜವಾಬ್ದಾರರಲ್ಲ. ಸರ್ವ ಪ್ರಯತ್ನವನ್ನೂ ಮಾಡೋಣ Government has taken every care and I am happy to announce, the families of the deceased people are very very happy, the society is happy and we have taken care and Government at best what it can do has been done.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಮದ್ಯಪಾನ ಆಳವಾಗಿ ಬೇರೂರಿದೆ. ಇದು ಮತ್ತೆ ಪುನರಾವರ್ತನೆಯಾಗದಂತೆ ಕಾನೂನು ಬದಲಾವಣೆಯನ್ನಾದರೂ ಮಾಡಿ, ಒಂದು ಸಮಿತಿಯನ್ನಾದರೂ ನೇಮಕ ಮಾಡೋಣವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಸಮಿತಿಯಲ್ಲಿ ಸಮಾಜ ಸುಧಾರಕರೂ, ಕಾನೂನು ತಜ್ಞರೂ, ಇರುವಂತ ಸಮಿತಿಯನ್ನು ರಚನೆ ಮಾಡುತ್ತೀರಾ ?

ಅಧ್ಯಕ್ಷರು.—ಬೇಕಾದರೆ ವಿಚಾರ ಮಾಡೋಣವೆಂದು ಹೇಳಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಸಮಿತಿ ಅಗತ್ಯ ಇದೆ.

ಶ್ರೀ ಆರ್. ಗುಂಡೂರಾವ್.—ನ್ಯಾಯಾಂಗ ತನಿಖೆಗೆ ಏರ್ಪಾಡು ಮಾಡಿದ್ದೇವೆ. ಅವರು ಏನು ಸಲಹೆ ಕೊಡುತ್ತಾರೆಂದು ನೋಡಿಕೊಂಡು ಬೇಕಾದರೆ, ಮಾಡೋಣ

SRI K. BHASKAR NAIDU.—The Hon'ble Chief Minister has explained in detail the tragedy and he has very well said what we should do and how we should come to the help of the poor people. In the process, I think, the officers have been let down very badly. We know, particularly, I do not know his name, the Excise Commissioner, I have heard, is a very good officer. Unfortunately he had a shock in the morning. We must feel sorry for it. Let not the officers feel that most of us have condemned them. We don't have that intention. I would like to say that we have a team of able officers and the Excise Commissioner is a very good officer.

FINANCIAL BUSINESS

Discussion and Voting of Demands for Grants

Demands 6 and 21

† ಶ್ರೀ ಎಂ. ಮಾದಯ್ಯ.—(ಸಂತೇಮಾರನಹಳ್ಳಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಈ ಸಾಲಿಗೆ ಮಂಡಿಸಿಗತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ತಮ್ಮ ಮೂಲಕ ಸಭೆಯ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಅರಣ್ಯ ಒಂದು ನಾಡಿನ ಶ್ರೇಯಸ್ಸಿಗೆ ಎಷ್ಟು ಪ್ರಾಮುಖ್ಯ ಎನ್ನುವುದನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ತಿಳಿಯದೇ ಇರ ತಕ್ಕವರು ಬಹಳ ವಿರಳ ಅಂದರೆ ತಪ್ಪಾಗಲಾರದು. ನಾಡಿಗೆ ನಿಸರ್ಗದತ್ತವಾದ ಸಂಪತ್ತು ಅರಣ್ಯ. ಒಂದು ಮನೆಗೆ ಮೇಲ್ಛಾವಣಿ ಎಷ್ಟು ಮುಖ್ಯವೋ, ಒಂದು ನಾಡಿಗೆ ಕಾಡೂ ಕೂಡ ಅಷ್ಟೇ ಮುಖ್ಯ.

ಮರಗಳ ಸೊಂಪು ಇರತಕ್ಕ ಜಾಗದಲ್ಲಿ, ತಂಪಾದ ವಾತಾವರಣ ಇರುತ್ತೆ, ತಂಪಾದ ವಾತಾವರಣ ಇರತಕ್ಕ ಜಾಗಗಳಲ್ಲಿ ಮೋಡಗಳನ್ನು ತಡೆದು ಮಳೆಯನ್ನು ಸುರಿಸುತ್ತವೆ. ಮರದ ಎಲೆಗಳು ಮಳೆಯ ನೀರನ್ನು ತಡೆದು, ನೀರಿನ ಒತ್ತಡವನ್ನು ಕಡಿಮೆ ಮಾಡಿ ಭೂಮಿಯ ಮೇಲೆ ಬಿದ್ದು, ಮಣ್ಣು ಸವಕಲಾಗುವುದನ್ನು ತಪ್ಪಿಸಿ, ಕೆರೆ ಕಟ್ಟೆ, ಭಾವಿಗಳಿಗೆ ನೀರು ಹರಿದು, ನೀರನ್ನು ಭೂಮಿ ಕುಡಿದು, ಕೆರೆಕಟ್ಟೆಗಳು ತುಂಬುವುದಲ್ಲದೆ, ಭೂಮಿಯಲ್ಲಿ ನೀರಿನ ಮಟ್ಟ ಮೇಲಕ್ಕೆ ಬಂದು, ಸಂಪದ್ಭರಿತವಾದ ಬೇಸಾಯಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತದೆ. ಹಾಗಾದರೆ ನಾಡಿನ ಅಭಿವೃದ್ಧಿಯಾಗುತ್ತದೆ. ಕಾಡು ಬೆಳೆದರೆ, ಖಗ ಮೃಗ ಪಕ್ಷಿಗಳಿಗೆ ಆವಾಸಸ್ಥಾನವಾಗುತ್ತದೆ. ಕಾಡು ಹಸಿರು ವರ್ಣವನ್ನು ಕೊಡುತ್ತದೆ, ಇವೆಲ್ಲಾ ಸೌಕರ್ಯ ಇರುವುದರಿಂದ ನಾಡಿನ ಸಮೃದ್ಧಿಗೆ ಕಾಡಿನಿಂದ ಬಹಳ ಅನುಕೂಲ ಇದೆ. ಕಾಡಿನಿಂದ ಜನತೆಗೆ ಬೇಕಾದಂತ ಮರಮುಟ್ಟುಗಳು ಸಿಗುತ್ತವೆ. ಪ್ರತಿನಿತ್ಯ ಬೇಕಾದಂತ ಉರುವಲು, ವ್ಯವಸಾಯಕ್ಕೆ ಬೇಕಾದಂತ ಸಲಕರಣೆಗಳು ದೊರೆಯುತ್ತವೆ.

೧೨–೦೦ ಮಧ್ಯಾಹ್ನ

† ಅಧ್ಯಕ್ಷರೇ, ನಮ್ಮ ನಾಡಿಗೆ ಕಾಡಿನ ಪ್ರಾಧಾನ್ಯತೆ ಬಹಳ ಇದೆ, ರಾಷ್ಟ್ರೀಯ ಪರಿಮಿತಿಯ ಪ್ರಕಾರ ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಒಂದು ದೇಶದಲ್ಲಿ ಮೂರನೇ ಒಂದು ಭಾಗದಷ್ಟು ಭೂಮಿ ಅರಣ್ಯ ರೀತಿಯಲ್ಲಿ ಇರಬೇಕೆಂದು ತಜ್ಞರು ಹೇಳಿದ್ದಾರೆ. ಕೆಲವು ವರ್ಷಗಳ ಹಿಂದಿನ ಲೆಕ್ಕವನ್ನು ನೋಡಿದರೆ ನಮ್ಮ ಕರ್ನಾಟಕದಲ್ಲಿ ಕೇವಲ ಹದಿನಾರು ಪರ್‌ಸೆಂಟ್ ಮಾತ್ರ ಇತ್ತು. ಇತ್ತೀಚೆಗೆ ಈ ಪ್ಲಾಂಟೇಷನ್ ಪ್ರೋಗ್ರಾಂಗಳನ್ನು ತೆಗೆದುಕೊಂಡು ಬಂದಮೇಲೆ ಈಗ ಹತ್ತೊಂಬತ್ತು ಪರ್‌ಸೆಂಟ್‌ಗೆ ಬಂದಿದೆ. ಆಲ್ ಇಂಡಿಯಾ ಸರಾಸರಿ ಎಷ್ಟು ಇರಬೇಕು ಎಂದರೆ ಇಪ್ಪತ್ತೊಮ್ಮರು ಪರಸೆಂಟ್ ಇರಬೇಕಾಗುತ್ತದೆ ಈಗ ಇಪ್ಪತ್ತೊಮ್ಮರು ಪರ್‌ಸೆಂಟ್ ಕೂಡ ಸಾಲದು ಎಂದು ಹೇಳಬೇಕಾಗುತ್ತದೆ. ರಾಷ್ಟ್ರೀಯ ನೀತಿಯ ಪ್ರಕಾರ ಮುವತ್ತೊಮ್ಮರು ಪರ್‌ಸೆಂಟ್‌ವರೆಗೆ ನಾವು ಕಾಡಿನ ವಿಸ್ತೀರ್ಣವನ್ನು ಹೆಚ್ಚಿಸಬೇಕಾಗುತ್ತದೆಂದು ಹೇಳುತ್ತೇನೆ. ಈ ರೀತಿ ಹೆಚ್ಚಿಸಬೇಕಾದರೆ ನಾನಾ ಕಾರಣಗಳಿಂದ ಸ್ವಲ್ಪ ತಡೆ ಬಂದಿದೆ. ವಿದ್ಯುತ್ ತಂತಿಗಳನ್ನು ಹಾಕುವ ಮೂಲಕ, ಜಲಾಶಯಗಳನ್ನು ನಿರ್ಮಾಣ ಮಾಡುವ ಮೂಲಕ ನಿರ್ವಸತಿಗರಿಗೆ ಜಮೀನು ಕೊಡುವ ಮೂಲಕ, ಹೊಸದಾಗಿ ರಸ್ತೆಗಳನ್ನು ಮಾಡುವ ಮೂಲಕ ಮತ್ತೆ ವ್ಯವಸಾಯಕ್ಕೆ ಜಮೀನು ಇಲ್ಲದೇ ಇರುವವರಿಗೆ ಜಮೀನು ಕೊಡುವ ಮೂಲಕ, ಕಳ್ಳಕಾಕರುಗಳಿಂದಾಗಿ ನಾವು ಅಷ್ಟು ಅರಣ್ಯವನ್ನು ಬೆಳೆಸಲಿಕ್ಕೆ ಸಾಧ್ಯವಾಗದೇ ಹೋಗಿದೆ. ಈ ತರಹ ನಷ್ಟಗಳ ದೆಸೆಯಿಂದ ಸಾಮಾನ್ಯವಾಗಿ ಒಂದು ಕಾಲು ಭಾಗದಷ್ಟು ಅರಣ್ಯ ನಾಶವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಇವೊತ್ತು ಜನರಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡಬೇಕಾದರೆ ನಾವು ಅರಣ್ಯವನ್ನು ಯಾವ ರೀತಿ ಹೆಚ್ಚಿಸಿಕೊಂಡು ಹೋಗಬೇಕು ಎಂದರೆ, ಈಗ ಇರತಕ್ಕ ಅರಣ್ಯವನ್ನು ಉಳಿಸಿಕೊಳ್ಳುವುದೇ ಅಲ್ಲದೆ, ಅದರ ಜೊತೆಗೆ ನಾವು ಅರಣ್ಯವನ್ನು ಹೆಚ್ಚು ಹೆಚ್ಚು ಬೆಳೆಸಿ ಒಂದು ಸಮಯೋಚಿತವಾಗಿ ಮತ್ತು ವಿವೇಚನಾಪರರಾಗಿ ಅದನ್ನು ವಿನಿಯೋಗ ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಬಿಟ್ಟು ನಾವು ಸಿಕ್ಕಾಪಟ್ಟೆ ಉಪಯೋಗಿಸಲಿಕ್ಕೆ ಬಿಟ್ಟರೆ ನಾವು ಬಹುಭಾಗ ಫಾರೆಸ್ಟನ್ನು ಕಳೆದುಕೊಳ್ಳುತ್ತೇವೆ. ಎನ್ನುವ ಭಯ ನಮ್ಮಲ್ಲಿ ಇದೆ ಸಾಮಾನ್ಯವಾಗಿ ಅರಣ್ಯವನ್ನು ಹೆಚ್ಚು ಮಾಡಬೇಕಾದರೆ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಉಳಿದು ಬಾಕಿ ಜಾಗ, ಅಂಗೈ ಅಗಲ ಜಾಗ ಸಿಕ್ಕಿದರೂ ಸರಿಯೇ ಆ ಜಾಗದಲ್ಲಿ ಒಂದೊಂದು ಗಿಡವನ್ನು ನೆಡುವ ಏರ್ಪಾಡು ಮಾಡಬೇಕಾದುದು ಪ್ರಜೆಗಳ ಕರ್ತವ್ಯವೂ ಹೌದು, ಫಾರೆಸ್ಟ್ ಇಲಾಖೆಯ ಕರ್ತವ್ಯವೂ ಹೌದು. ಆ ರೀತಿ ಮಾಡದೇ ಹೋದರೆ, ನಮ್ಮಲ್ಲಿ ಅರಣ್ಯ ಹೆಚ್ಚು ಬೆಳಸಲಿಕ್ಕೆ ಕಷ್ಟವಾಗುತ್ತದೆ, ಇವೊತ್ತು ರೈತರಲ್ಲಿ ಸಾಮಾನ್ಯವಾಗಿ ಯಾವ ವಿಧವಾದ ಉತ್ಸಾಹ ಇಲ್ಲ. ನಾವು ಗಿಡಮರಗಳನ್ನು ಬೆಳೆಯಬೇಕು, ನಮಗೆ ಬೇಕಾದಂಥ ಉರುವಲಿಗೋಸ್ಕರ ಬೆಳೆದುಕೊಳ್ಳಬೇಕು ನಮ್ಮ ಅನುಕೂಲಗಳಿಗೆ ಬೇಕಾದ ಪ್ರಯೋಜನವನ್ನು ಹೊಂದಿಸಿಕೊಳ್ಳಬೇಕು ಎನ್ನುವ ಪ್ರಜ್ಞೆ ಅವರಲ್ಲಿ ಇಲ್ಲ. ಇಂತಹ ಸಂದರ್ಭಗಳಲ್ಲಿ ಅರಣ್ಯ ಇಲಾಖೆಯವರು ನಾಲ್ಕಾರು ವರ್ಷ ಉಚಿತವಾಗಿ ಪ್ರತಿಯೊಬ್ಬರ ಜಮೀನಿನಲ್ಲೂ, ಬೆಳೆಸಿಕೊಡಲಿಕ್ಕೆ ಎಕ್ಸಪರಿಮೆಂಟ್ ಆಗಿ ಮಾಡಿದರೆ ಜನರು ಇನ್ನು ಮುಂದೆ ಅದನ್ನು ನೋಡಿಕೊಂಡು ತಾವಾಗಿಯೇ ಗಿಡಗಳನ್ನು ಬೆಳಸತಕ್ಕ ಒಂದು ಮನಪರಿಕೆ ಬೆಳೆಯುತ್ತದೆ, ಈ ತರಹ ಮನವರಿಕೆ ಬೆಳೆಯುವಂತೆ ಮಾಡತಕ್ಕದ್ದು ಅರಣ್ಯ ಇಲಾಖೆಯ ಕರ್ತವ್ಯ ಎಂದು ನನ್ನ

ಭಾವನೆ. ಇವೊತ್ತು ಬೆಟ್ಟು ಗುಡ್ಡಗಳಲ್ಲಿ ಮಣ್ಣು ಇರುವುದಿಲ್ಲ, ಅಲ್ಲಿ ಮರಗಳನ್ನು ಬೆಳಸಬೇಕು ಎಂದರ ಬಹಳ ಕಷ್ಟ. ಆದರೆ ಬೆಟ್ಟ ಗುಡ್ಡಗಳು ಇರತಕ್ಕ ಪ್ರದೇಶದಲ್ಲಿ ಈ ಪೊದೆಗಳು ಏನಿರುತ್ತದೆ ಅಲ್ಲಿ ಅದು ಮಣ್ಣನ್ನು ತಡೆದುಇಟ್ಟಿರುತ್ತದೆ. ಆ ಜಾಗದಲ್ಲಿ ಏನು ಮಾಡಬೇಕು ಎಂದರೆ, ಯಾವುದೇ ವಿಧವಾದ ಬೀಜವನ್ನು ಆ ಪೊದೆಗಳಲ್ಲಿ ಹಾಕಿದರೆ ಒಂದೆರಡು ವರ್ಷಗಳಲ್ಲಿ ಒಂದೆರಡು ಮರಗಳನ್ನು ಬೆಳೆಯಬಹುದು. ಮರಗಳನ್ನು ಬೆಳಸಬೇಕಾದರೆ ಬೀಜವನ್ನು ಹಾಕಿ ಬೆಳಸಬಹುದು, ಸಸಿಗಳನ್ನು ನೆಡುವ ಮೂಲಕ ಬೆಳಸಬಹುದು, ಕೊಂಬೆಗಳನ್ನು ನೆಡುವ ಮೂಲಕ ಬೆಳಸಬಹುದು. ಯಾವ ಯಾವ ಜಾಗದಲ್ಲಿ ಯಾವ ಯಾವ ರೀತಿಯಲ್ಲಿ ಪ್ಲಾಂಟೇಷನ್ ಮಾಡಬೇಕು ಎನ್ನುವುದನ್ನು ನೋಡಿ ಒಳ್ಳೆಯ ಮಣ್ಣು ಸಿಕ್ಕಿದ ಜಾಗದಲ್ಲಿ ಸಸಿಗಳನ್ನು ನೆಡುವುದು, ಕೊಂಬೆಗಳನ್ನು ನೆಡುವುದು. ಈ ರೀತಿ ಮಾಡಿದರೆ ಸಾಕಷ್ಟು ಮರಗಳನ್ನು ಬೆಳಸಬಹುದು. ಮಣ್ಣು ಇಲ್ಲದೇ ಬರೀ ಕಲ್ಲು ಇರತಕ್ಕ ಜಾಗದಲ್ಲಿ ಪೊದೆಗಳನ್ನು ಹುಡುಕಿ ಅಲ್ಲಿ ಬೀಜ ಹಾಕಿದರೆ ಮರಗಳು ಬೆಳೆಯಲಿಕ್ಕೆ ಅವಕಾಶ ಇದೆ. ಹಿಂದೆ ಅದೇ ರೀತಿ ಮಾಡುತ್ತಿದ್ದರು. ಇತ್ತೀಚೆಗೆ ಅದನ್ನು ಕೈಬಿಟ್ಟಿದ್ದಾರೆ. ನನಗೆ ತಿಳಿದಮಟ್ಟಿಗೆ ಪೊದೆಗಳಲ್ಲಿ . ಬೀಜ ಹಾಕುವುದು, ಮರದ ರೆಂಬೆಗಳನ್ನು ನೆಡುವುದು ಇದು ಹೆಚ್ಚಾಗಿ ನಡೆಯುತ್ತಿಲ್ಲ. ಇದನ್ನು ನಾವು ಆಚರಣೆಗೆ ತಂದರೆ ನಾವು ಸಾಕಷ್ಟು ಅರಣ್ಯವನ್ನು ಬೆಳಸಲಿಕ್ಕೆ ಪ್ರಯತ್ನ ಮಾಡಿದಂತಾಗುತ್ತದೆ. ಇದನ್ನು ಮಾಡದೇ ಹೋದರೆ ನಾವು ಸಾಕಷ್ಟು ಅರಣ್ಯವನ್ನು ಬೆಳಸಲಿಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಮಾನ್ಯ ಸ್ನೇಹಿತರು ಅರಣ್ಯವನ್ನು ಬೆಳಸುವ ವಿಚಾರದಲ್ಲ ಮಾತನಾಡುತ್ತಾ, ಸರಿಯಾಗಿ ಗುಣಿಗಳನ್ನು ತೆಗೆಯದೇ ಸಸಿಗಳನ್ನು ಹಾಕುವುದರಿಂದ ನೂರಕ್ಕೆ ಎಪ್ಪತ್ತೈದು ಭಾಗ ಒಣಗಿ ಹೋಗುತ್ತವೆ ಎಂದು ಹೇಳಿದರು. ಗುಣಿಗಳನ್ನು ಸರಿಯಾಗಿ ತೆಗೆಯುವುದಿಲ್ಲ ಎಂದು ಹೇಳುವ ಕಾರಣವನ್ನು ನಾನು ಒಪ್ಪಲಿಕ್ಕೆ ಆಗುವುದಿಲ್ಲ ಗಿಡಗಳನ್ನು ಬೆಳಸಬೇಕಾದರೆ ಅನೇಕ ಕ್ರಮಗಳು ಇರುತ್ತವೆ. ಇವೊತ್ತು ಗಿಡಗಳನ್ನು ನೆಡುವಾಗ ಭೂಮಿಯಲ್ಲಿ ತೇವಾಂಶ ಸಿಕ್ಕಬಹುದು ಅಥವಾ ಸಿಕ್ಕದೇ ಇರಬಹದು. ಒಂದು ಗುಣಿಯಲ್ಲಿ ಸರಿಯಾದ ಮಣ್ಣು ಸಿಕ್ಕಬಹುದು, ಅಥವಾ ಒಂದು ಗುಣಿಯಲ್ಲಿ ಸರಿಯಾದ ಮಣ್ಣು ಸಿಕ್ಕದೇ ಇರಬಹುದು. ಗುಣಿಯನ್ನು ತೆಗೆದಾಗ ಆ ಜಾಗದಲ್ಲಿ ಗೆದ್ದಲು ಹಿಡಿಯುವ ಜಾಗ ಆಗಿದ್ದರೆ ಆ ಗಿಡವನ್ನು ಅದು ಸಾಯಿಸಲಿಕ್ಕೆ ಅವಕಾಶ ಇದೆ. ಈ ತರಹ ಆಗುವುದರಿಂದ ನಾವು ಹಾಕತಕ್ಕ ಗಿಡಗಳೆಲ್ಲವೂ ಬರುತ್ತವೆಂದು ಹೇಳಲಿಕ್ಕೆ ಆಗುವುದಿಲ್ಲ. ಕೊನೇಪಕ್ಷ ಐವತ್ತು ಪರ್ಸೆಂಟ್ ಬರುತ್ತದೆ. ಇವೊತ್ತು ಪ್ರತಿಯೊಂದು ಊರಿನಲ್ಲಿಯೂ ಕೂಡ ಪ್ರತಿಯೊಬ್ಬ ರೈತನೂ ತನ್ನ ಜಮೀನಿನಲ್ಲಿ ಮರಗಳನ್ನು ಬೆಳಸಲಿಕ್ಕೆ ಏರ್ಪಾಡು ಮಾಡಬೇಕು. ಜೊತೆಗೆ ಆತನ ಮನೆಯ ಮುಂದೆ ಒಂದೆರಡು ಗಿಡಗಳನ್ನು ಹಾಕುವುದಕ್ಕೆ ಸಾಕಷ್ಟು ಸ್ಥಳ ಇದ್ದರೆ ತೆಂಗಿನಗಿಡ, ಪರಂಗಿಗಿಡ ಕರಬೇವಿನಗಿಡ, ನಿಂಬೆಗಿಡ ಹಾಕುವಂತೆ ಮಾಡುವುದರ ಜೊತೆಗೆ ಹಿತ್ತಲಲ್ಲಿ ಅಂದರೆ ಮನೆಯ ಹಿಂಭಾಗದಲ್ಲಿ ಸ್ಥಳ ಇದ್ದರೆ, ಅಲ್ಲಿಯೂ ಕೂಡ ತೆಂಗಿನ ಮರ, ಹೊಂಗೆ ಮರ ಮುಂತಾದ ಮರಗಳನ್ನು ಬೆಳಸಲಿಕ್ಕೆ ತಿಳಿವಳಿಕೆಯನ್ನು ಕೊಡಬೇಕು ಆ ರೀತಿ ಅವನು ಮರಗಳನ್ನು ಬೆಳಸಿದ್ದೇ ಆದರೆ ಅವರ ಸ್ಥಿತಿಯನ್ನು ಸ್ವಲ್ಪ ಉತ್ತಮ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ವೃಕ್ಷೋ ರಕ್ಷಂತಿ ರಕ್ಷಿತಃ ಅಂದ ಹಾಗೆ ಒಂದು ಫಲ ಕೊಡತಕ್ಕಂತಹ ಮರವನ್ನು ಐದಾರು ವರ್ಷ ಶ್ರಮಪಟ್ಟು ಬೆಳಸಿದ್ದೇ ಆದರೆ ಅದು ಫಲ ಕೊಡಲಿಕ್ಕೆ ಪ್ರಾರಂಭವಾದ ಮೇಲೆ ಅದು ಅವನ ಜೀವನಪರ್ಯಂತ ಅನುಕೂಲವನ್ನು ಕೊಡುತ್ತದೆ. ಮರಗಳನ್ನು ಬೆಳಸತಕ್ಕದ್ದು ನಮ್ಮ ಪ್ರಥಮ ಕರ್ತವ್ಯ ಎಂದು ನಾವು ಬೆಳಸಬೇಕು. ವರ್ಷೇ ವರ್ಷೇ ವನಮಹೋತ್ಸವವನ್ನು ಮಾಡುತ್ತೇವೆ. ಬೇಕಾದಷ್ಟು ಗಿಡಗಳನ್ನು ನೆಡುತ್ತೇವೆ. ಆದರೆ ಅವೊತ್ತು ಇದ್ದಷ್ಟು ಉತ್ಸಾಹ, ಆ ಗಿಡಗಳನ್ನು ನೆಟ್ಟಮೇಲೆ ಅವುಗಳನ್ನು ಪೋಷಣೆ ಮಾಡುವುದಿಲ್ಲ. ಜನಗಳ ಮತ್ತು ದನಗಳ ಕಾಟದಿಂದ ಆ ಗಿಡಗಳನ್ನು ರಕ್ಷಿಸಲಿಕ್ಕೆ ಸರಿಯಾದ ಏರ್ಪಾಡು ಇಲ್ಲ. ಒಂದು ಸಾವಿರ ಸಸಿಗಳನ್ನು ನೆಟ್ಟರೆ ಒಂದು ಸಸಿ ಉಳಿಯುವುದು ಕಷ್ಟವಾಗುತ್ತದೆ. ಈ ಸಸಿಗಳನ್ನು ನೆಡತಕ್ಕ ಕೆಲಸ ಒಂದು ತೋರಿಕೆಯ ಕೆಲಸ ಇವನ್ನು ಮಾಡುವ ಬದಲು ಪ್ರತಿಯೊಂದು ಗ್ರಾಮಕ್ಕೂ ಹೋಗಿ ನಮ್ಮ ಅರಣ್ಯ ಸಂಪತ್ತಿನಿಂದ ಏನು ಲಾಭ ಇದೆ ಎನ್ನುವ ಬಗ್ಗೆ ಜನಗಳಿಗೆ ವಾರಕ್ಕೆ, ಹದಿನೈದು ದಿನಗಳಿಗೊಂದು ಸಾರಿ ತಿಳುವಳಿಕೆ ಕೊಟ್ಟು ಅವರಲ್ಲಿ ಅರಣ್ಯವನ್ನು ಬೆಳಸತಕ್ಕ ಮನೋಭಾವನೆ ಅವರ ಮನಸ್ಸಿನಲ್ಲಿ ಬರುವಂತೆ ಮಾಡಬೇಕು. ಇಂತಹ ಕೆಲಸಗಳು ಸಾಮಾನ್ಯವಾಗಿ ನಡೆಯುತ್ತಿಲ್ಲ. ಆದ್ದರಿಂದ, ಈ ಕೆಲಸ ಅತಿ ಜರೂರಾಗಿ ಮಾಡಬೇಕಾದಂಥ ಕೆಲಸ. ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಪರಿಶೀಲನೆ ಮಾಡಿ ಪ್ರತಿಯೊಬ್ಬರೂ ಕೂಡ ಮರಗಳನ್ನು ನೆಡಬೇಕು ಎನ್ನುವ ನಿಯಮವನ್ನು ಜಾರಿಗೆ ತರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

MR. DEPUTY SPEAKER.--Kindly highlight the important suggestions within the alloted time.

ಶ್ರೀ ಎಂ. ಮಾದಯ್ಯ.—ಅಲಾಟೆಡ್ ಟೈಂ ಅಂದರೆ ನಾವು ಹೇಳಬೇಕಾದ್ದನ್ನು ಹೇಳಬೇಕೋ ಅಥವಾ ಇಷ್ಟಕ್ಕೇ ನಿಲ್ಲಿಸಬೇಕೋ? ತಾವು ಬೇಡವೆಂದು ಹೇಳುವುದಾದರೆ ನಾನು ಇಷ್ಟಕ್ಕೇ ಕೂತುಬಿಡುತ್ತೇನೆ. ಇದಕ್ಕೆ ನನ್ನ ಅಭ್ಯಂತರವಿಲ್ಲ. What is the use of giving such a short period of time?

MR. DEPUTY SPEAKER.—Yesterday it was agreed to allot 10 minutes to each Member. Please conclude within five minutes because the Hon. Minister has to reply and the demand has to voted today itself. Kindly have this in your mind and proceed.

SRI M MADAIAH.—Sir. I was a forest officer who has served for a long period of 36 years. I have got a ripe experience in the Forest Department. That is why, I require some more time, ಇಂಥಾದ್ದರಲ್ಲಿ ನೀವು ಕೂತುಕೊಳ್ಳಿ ಎಂದರೆ ನಾನು ಏನು ಮಾಡಬೇಕು? ಅರಣ್ಯವನ್ನು ಕಾಪಾಡತಕ್ಕದ್ದರಲ್ಲೂ ಕೂಡ ನಿಮ್ಮ ಇಲಾಖೆಯವರು ಅನೇಕ ತಪ್ಪುಗಳನ್ನು ಮಾಡಿದ್ದಾರೆ. ಹಿಂದೆ ಏನು ಚಾಲ್ತಿಯಲ್ಲಿತ್ತು ಎಂದರೆ ಪ್ರತಿಯೊಬ್ಬ ಗಾರ್ಡಿಗೂ ಒಂದು ಬೀಟ್ ಬೌಂಡರಿ ಫಿಕ್ಸ್ ಮಾಡಿ ಅವನ ಬೀಟ್‌ನಲ್ಲಿ ಬರತಕ್ಕ ಮರಗಳನ್ನೆಲ್ಲಾ ಎನ್ಯುಮರೇಟ್ ಮಾಡಿ ಒಂದು ಪುಸ್ತಕದಲ್ಲಿ ಬರೆದು ಆ ಪುಸ್ತಕವನ್ನು ಅವನ ಕೈಗೆ ಕೊಡುತ್ತಿದ್ದರು. ಅವನು ಅದನ್ನು ಇಟ್ಟುಕೊಂಡು he has to look after the forest. The area alloted to him should not be more than 12 square miles...೧೨ ಚದರ ಮೈಲಿಗೆ ಹೆಚ್ಚಾಗಿ ಇರಬಾರದು. ಈಗ ಬೇಕಾದಷ್ಟು ಜನರಿದ್ದಾರೆ. ೧೨ ಚದರ ಮೈಲಿಯೊಳಗೆ ಬೌಂಡರಿ ಫಿಕ್ಸ್ ಮಾಡಿ ಇದರಲ್ಲಿ ಇಂಥಿಂಥ ಗಿಡಗಳಿವೆ, ಇಂಥಿಂಥ ಮರಗಳಿವೆ ಎಂದು ಬರೆದು ಅವನ ಕೈಗೆ ಕೊಟ್ಟು ಇದನ್ನು ಕಾಪಾಡತಕ್ಕದ್ದು ನಿನ್ನ ಜವಾಬ್ದಾರಿಗೆ ಬಿಡುತ್ತಿದ್ದೇವೆ; ಎಂದು ಹೇಳುತ್ತಿದ್ದರು. ಅವನು ಜಂಗಲ್‌ನಲ್ಲಿ ವಾಸಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದರು. ಅವನು ಪಟ್ಟಣಕ್ಕೂ ಕೂಡ ಬರಬಾರದು. ಅವನಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಬೇಕು, ಅವನ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾಡುತ್ತಿದ್ದರು. ಏಕೆಂದರೆ ಫ/ರೆಸ್ಟ್ ಜೀವನ ಅಷ್ಟು ಸುಲಭ ಅಲ್ಲ. ಫಾರೆಸ್ಟ್‌ನಲ್ಲಿರತಕ್ಕವರ ಜೀವನ ಎಂದರೆ ಸೈನ್ಯದಲ್ಲಿರತಕ್ಕವರ ಜೀವನ ಇದ್ದಂತೆ. ಬೆಟ್ಟ ಹತ್ತಬೇಕು, ಬೆಟ್ಟ ಇಳಿಯಬೇಕು. ಮೃಗಗಳ ಮಧ್ಯೆ ಓಡಾಡಿಕೊಂಡಿರಬೇಕು. ಅದು ಬಹಳ ಕಷ್ಟದ ಜೀವನ. ಮಲೆನಾಡಿನಲ್ಲಿರತಕ್ಕವರಿಗೆ. ಬೀಟ್‌ನಲ್ಲಿರತಕ್ಕವರಿಗೆ, ಬೆಟ್ಟ ಹತ್ತುವವರಿಗೆ, ಸ್ಪೆಷಲ್ ಅಲೋಯನ್ಸ್ ಕೊಟ್ಟು, ಅವರು ಇರತಕ್ಕ ಜಾಗಗಳಿಗೇ ದವಸ ಧಾನ್ಯಗಳನ್ನು ಹಾಗೂ ಇತರೇ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಟ್ಟರೆ ನಿಮ್ಮ ಫಾರೆಸ್ಟ್ ಉಳಿಯುವುದರಲ್ಲಿ ಯಾವ ಅನುಮಾನವೂ ಇಲ್ಲ. ಅಲ್ಲಿ ಕಳ್ಳತನ ಆಗುವುದಿಲ್ಲ. ಸ್ಮಗಲರ್ಸ್ ಏನು ಬೇಕಾದರೂ ಮಾಡುತ್ತಾರೆ. ಅವರಿಗೆ ಬೇಕಾದಷ್ಟು ವಾಹನಗಳಿವೆ. ಬಂದೂಕು, ಗುಂಡು ಎಲ್ಲಾ ಇರುತ್ತದೆ. ಅವರು ಇವರನ್ನು ಬೆದರಿಸಿ ಎಷ್ಟು ಮರಗಳನ್ನು ಬೇಕಾದರೂ ತೆಗೆದುಕೊಂಡು ಹೋಗಬಹುದು. ಆದ್ದರಿಂದ ನೀವು ಅವರಿಗೆ ಅನುಕೂಲಗಳನ್ನು ಮಾಡಿಕೊಡದಿದ್ದರೆ ಅವರೂ ಕೂಡ ಏನು ಮಾಡುವುದಕ್ಕೆ ಆಗುವುದಿಲ್ಲ. ಕಳ್ಳರು ಬಂದು ಎಲ್ಲವನ್ನೂ ಹೊತ್ತುಕೊಂಡು ಹೋದರು, ಇದಕ್ಕೆ ನಾವು ಏನು ಮಾಡುವುದಕ್ಕಾಗುತ್ತದೆಂದು ಅವರು ಹೇಳುವುದಾದರೆ ಅದರಿಂದ ಏನು ಪ್ರಯೋಜನ? ನಮ್ಮ ದೇಶದಲ್ಲಿ ಗಂಧದ ಮರಗಳು ಎಂಥ ಅಮೂಲ್ಯವಾದ ಸಂಪತ್ತು. ದಿನನಿತ್ಯ ಕಳ್ಳತನವಾಗುತ್ತಿದೆ ಎಂದು ಹೇಳುತ್ತೀರಿ. ಇದಕ್ಕೆ ಕಾರಣವಾದರೂ ಏನು? ನೀವು ಇದರ ಬಗ್ಗೆ ಲೆಕ್ಕಾಚಾರ ಇಟ್ಟುಕೊಳ್ಳದಿರುವುದರಿಂದ, ನಿಗಾ ಇಟ್ಟುಕೊಳ್ಳದಿರುವುದರಿಂದ ಈ ರೀತಿ ಕಳ್ಳತನವಾಗುತ್ತಿದೆಯೇ ಹೊರತು ಸುಮ್ಮ ಸುಮ್ಮನೆ ಹೋಗುವುದಿಲ್ಲ, ಕಳ್ಳತನ ಆಗಬೇಕಾದರೆ ಅಲ್ಲಿನ ಸುತ್ತಮುತ್ತ ಇರತಕ್ಕ ಜನರ ಕುಮ್ಮಕ್ಕು ಅವರಿಗೆ ಇರಬೇಕು. ಆದ್ದರಿಂದ ನೀವು ಆ ಸುತ್ತಮುತ್ತ ಇರತಕ್ಕ ಜನರನ್ನು ನಿಮ್ಮ ಪರವಾಗಿ ಇಟ್ಟುಕೊಂಡು ಅವರಿಂದ ದಿನನಿತ್ಯ ಸಮಾಚಾರಗಳನ್ನು ತರಿಸಿಕೊಳ್ಳುತ್ತಿದ್ದು ಯಾವತ್ತು ಕಳ್ಳತನವಾಗುತ್ತದೆ, ಆ ಕಳ್ಳರನ್ನು ಎಲ್ಲಿ ಹಿಡಿಯಬೇಕು ಏನು ಮಾಡಬೇಕೆಂಬುದು ನಿಮಗೆ ಗೊತ್ತಾಗುತ್ತದೆ. ಇದರ ಬಗ್ಗೆ ಸರ್ಕಾರದವರು ನಿಗಾ ವಹಿಸಬೇಕು.

ಈಗ ಅರಣ್ಯ ಇಲಾಖೆಯಲ್ಲಿ ನಾನಾ ರೀತಿಯ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಆದರೆ ರೀಸರ್ಚ್ ಎನ್ನುವ ಒಂದು ವಿಭಾಗ ಇದೆ. ಈ ವಿಭಾಗ ನಾನು ಕೆಲಸಕ್ಕೆ ಸೇರುವುದಕ್ಕೆ ಮುಂಚೆಯಿಂದಲೂ ಇತ್ತು. ಅಲ್ಲಿ ಏನು ಕೆಲಸವಾಗಿದೆ ಎಂಬುದು ಆ ದೇವರಿಗೇ ಗೊತ್ತು. Spike disease, and leafkar mosaic disease....ಎನ್ನುವುದು ಈಗಲೂ ಇದೆ. ಕಳೆದ ೬೦ ವರ್ಷಗಳಿಂದಲೂ ಇದಕ್ಕೆ ಕಾರಣ ಏನು ಎನ್ನುವುದನ್ನು ಕಂಡು ಹಿಡಿದಿಲ್ಲ. ಹಾಗಾದರೆ ಈ ರೀಸರ್ಚ್ ವಿಂಗ್ ಮಾಡುತ್ತಿರುವ ಕೆಲಸವಾದರೂ ಏನು? ಅವರಿಗಾಗಿ ಬೇಕಾದಷ್ಟು ಹಣ ಖರ್ಚಾಗುತ್ತಿದೆ. ವರ್ಕಿಂಗ್ ಪ್ಲಾನ್ ಇದೆ. ಅವರು ಏನು ಮಾಡುತ್ತಿದ್ದಾರೆ. ವರ್ಷದಲ್ಲಿ ಎಷ್ಟು ಫಾರೆಸ್ಟ್‌ಗಳಿಗೆ ಪ್ಲಾನ್ ಬರೆಯುತ್ತಾರೆ? ಇದರಂತೆ ಅಲ್ಲಿ ಕೆಲಸವಾಗುತ್ತಿದೆಯೋ ಇಲ್ಲವೇ? ಎಷ್ಟು ಮರಗಳನ್ನು ನೆಡುತ್ತಿದ್ದಾರೆ ಇನ್ನೂ ಮುಂತಾದ ವಿಚಾರಗಳನ್ನು ನೋಡುವವರಿಲ್ಲ, ಕೇಳುವವರೂ ಇಲ್ಲ. ಈ ರೀತಿ ನಡೆಯುತ್ತಿದೆ. ಫಾರೆಸ್ಟ್ ಇಂಡಸ್ಟ್ರೀ ಇದೆ; ವುಡ್ ಇಂಡಸ್ಟ್ರೀ ಇದೆ. ಬೇರೆಯವರ ಕೈಗೆ ಇದನ್ನು ಏತಕ್ಕೆ ಕೊಡಬೇಕಾಗಿತ್ತು. ಇವತ್ತು ಒಂದಕ್ಕೆ ೨೦ ರಷ್ಟು ಸಿಬ್ಬಂದಿವರ್ಗ ಇದೆ. ಹಿಂದಿನವರು ಇಷ್ಟೊಂದು ಏತಕ್ಕೆ ಮಾಡಿದರು ? ಇವತ್ತು ಜನಗಳಿಗೆ ಅದರಲ್ಲೂ ಹರಿಜನರಿಗೆ ಬಹಳ ತೊಂದರೆಗಳಾಗುತ್ತಿವೆ. ಬಡವರಿಗೆ ಅತಿ ಮುಖ್ಯವಾಗಿ ಬೇಕಾದದ್ದು ಎಂದರೆ ಎಂದು ನೇಗಿಲನ್ನು ಮಾಡಬೇಕಾದರೆ ಒಂದು ನೇಗಿಲ ತುಂಡು. ಒಂದು ತಡಿ, ಒಂದು ನೇಗಿಲ ಮರ, ಒಂದು ನೊಗ, ಒಂದು ಮೇಣಿ, ಇಷ್ಟು ಸಾಮಾನುಗಳು ಬೇಕು. ಒಂದು ಷೆಡ್ ಕಟ್ಟಿಕೊಳ್ಳಬೇಕಾದರೆ ೨೬ ಗಳಗಳು, ೩-೪ ಕವೆಗಳು, ೮-೧೦ ಬೊಂಬುಗಳು ಬೇಕು. ಜಂಗಲ್‌ನಲ್ಲಿ ಎಲ್ಲೂ ಸಿಕ್ಕುವುದಿಲ್ಲ. ಸೌದೆ ಸಿಕ್ಕುವುದಿಲ್ಲ. ಈ ರೀತಿ ಮಾಡಿರುವುದರಿಂದ ಬಡವರು ಹೇಗೆ ಷೆಡ್ಡುಗಳನ್ನು ಕಟ್ಟಿಕೊಳ್ಳಬೇಕು? ಇದೊಂದು ದುರ್ಭಿಕ್ಷದ ಕಾಲವೆಂದು ನಾವು ಹೇಳಿಕೊಳ್ಳಬೇಕಾಗಿದೆ. ಏಕೆಂದರೆ ಇವತ್ತು ಸೀಮೆ ಎಣ್ಣೆ ಸಿಕ್ಕುವುದಿಲ್ಲ. ಗ್ಯಾಸ್ ಸಿಕ್ಕುವುದಿಲ್ಲ, ಸಾಮಾನ್ಯ ಜನರು ಎಲೆಕ್ಟ್ರಿಕ್ ಲೈಟ್ ಹಾಕಿಸಿಕೊಳ್ಳುವುದಕ್ಕಾಗುವುದಿಲ್ಲ. ಇಂಥ ತೊಂದರೆಗಳೆಲ್ಲಾ ಇರುವಾಗ ಸೌದೆಯೂ ಇಲ್ಲದೆ ಜೀವನವನ್ನು ಮಾಡುವುದಾದರೂ ಹೇಗೆ? ಫಾರೆಸ್ಟ್‌ನಲ್ಲಿ ಮರ ಇಲ್ಲ, ನೀವು ಹೇಗಾದರೂ ಸಾಯಿರಿ ಎಂದು ಹೇಳುವುದು ಸರಿಯೇ? ಮೊದಲು ಜನಗಳು ಧಾರಾಳವಾಗಿ ಕಾಡಿಗೆ ಹೋಗಿ ಸೌದೆಯನ್ನು ತರುತ್ತಿದ್ದರು. ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು, ಷೆಡ್ಡುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಈಗ ನೀವು ಅವರಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ? ನಾವು ಜಂಗಲ್‌ನ್ನು ಪ್ರೊಟೆಕ್ಟ್ ಮಾಡಬೇಕಾಗಿರುವುದರಿಂದ ನೀವು ಜಂಗಲ್‌ಗೆ ಹೋಗಬೇಡಿ ಎಂದು ಹೇಳುತ್ತಿದ್ದೀರಿ. ಅವರು ಜಂಗಲ್‌ಗೆ ಹೋಗುವುದು ಬೇಡವೆಂದು ಹೇಳುವುದಾದರೆ ಅವರಿಗೆ ಡಿಪೋ ಮೂಲಕ ಒದಗಿಸಿ. ಇವತ್ತು ಹೋದರು ಬುಟ್ಟಿ ಮಾಡುವುದು ಯಾವುದರಲ್ಲಿ? ಬಡವರು ಮನೆ ಕಟ್ಟಿಕೊಳ್ಳುವುದು ಯಾವುದರಲ್ಲಿ, ಅವರು ಅಡಿಗೆ ಮಾಡುವುದು ಹೇಗೆ? ಅನುಕೂಲವಾಗಿರುವವರು ಎಲೆಕ್ಟ್ರಿಸಿಟಿ ಹಾಕಿಸಿಕೊಳ್ಳುತ್ತಾರೆ ಗ್ಯಾಸ್ ತರುತ್ತಾರೆ, ಏನು ಬೇಕಾದರು ಮಾಡಿಕೊಳ್ಳುತ್ತಾರೆ. What about lakhs and lakhs of people? How are they going to live? What facilities you have given to them ಎಷ್ಟು ಜನರಿಗೆ ನೀವು ಇದನ್ನು ಕೊಡುತ್ತೀರಿ? ನೀವು ಕಾಡನ್ನು ಉಳಿಸುವ ಉದ್ದೇಶ ಇಟ್ಟುಕೊಂಡಿರೇ ಹೊರತು ಜನಗಳ ಗತಿ ಏನು ಎಂಬುದನ್ನು ನೀವು ಗಮನಿಸಲಿಲ್ಲ. ಒಬ್ಬ ವ್ಯಕ್ತಿಗೆ ಬೇಕಾದ ಸೌದೆಯ ಮರವನ್ನು ಆತನು ತನ್ನ ಜಮೀನಿನಲ್ಲೇ ಬೆಳೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಆದರೆ ಆ ಮರ ಬೆಳೆಯಬೇಕಾದರೆ ಕೊನೇಪಕ್ಷ ೫ ವರ್ಷವಾದರೂ ಬೇಕಾಗುತ್ತದೆ. ಅಲ್ಲಿಯವರೆಗೂ ಈಗ ಹೇಗೆ ಜೀವನ ಮಾಡಬೇಕು? ರೈತ ತನ್ನ ಜಮೀನಿನಲ್ಲಿ ಬೆಳೆದ ಮರವನ್ನೂ ಸಲೀಸಾಗಿ ತರುವುದಕ್ಕಾಗುವುದಿಲ್ಲ. ಮೊದಲು ತಹಸೀಲ್ದಾರರಿಗೆ ಒಂದು ಅರ್ಜಿ ಕೊಟ್ಟರೆ ರೆವಿನ್ಯೂ ಇನ್‌ಸ್ಪೆಕ್ಟರ್ ಹೋಗಿ ಹೌದು ಅವನ ಜಮೀನಿನಲ್ಲಿ ಮರ ಇದೆ, ಅವನಿಗೆ ಪಾಸ್ ಕೊಡಬಹುದೆಂದು ಹೇಳಿದರೆ ಅವನಿಗೆ ಸುಲಭವಾಗಿ ಪಾಸ್ ಕೊಡುತ್ತಿದ್ದರು. ಇವತ್ತು ಏನು ತೊಂದರೆ ಇದೆ ಎಂದರೆ ಉದಾಹರಣೆಗೆ ಈಗ್ಗೆ ೫೦ ವರ್ಷಗಳ ಹಿಂದೆ ಯಾರೋ ಒಬ್ಬ ವ್ಯಕ್ತಿಯ ತಂದೆಗೆ ಗ್ರ್ಯಾಂಟ್ ರೂಪದಲ್ಲೋ, ಅಥವಾ ಬೇರೆ ಯಾವುದೋ ರೂಪದಲ್ಲೋ ಜಮೀನು ಬಂದಿದ್ದರೆ ಅದರ ದಾಖಲೆಯನ್ನು ತೆಗೆದುಕೊಂಡು ಬಾ ಎಂದು ಕೇಳುತ್ತಾರೆ. ಆ ದಾಖಲೆಗಳನ್ನು ತರಲು ೫ ವರ್ಷವಾದರೂ ಸಾಧ್ಯವಾಗುವುದಿಲ್ಲ. ಅಂದರೆ ಅಷ್ಟೊಂದು ಕಷ್ಟವಿದೆ. ಷೇಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅನುಕೂಲ ಮಾಡಿಕೊಡಬೇಕು, ಅಲ್ಲಿ ಕೆಲಸ ಮಾಡುವವರಿಗೆ ಮನೆ ಕಟ್ಟಿಕೊಡಬೇಕು, ಎಂದು ತಾವು ಹೇಳುತ್ತಿದ್ದೀರಿ. ಆದರೆ ಚಾಮರಾಜನಗರದಲ್ಲಿ ಏನೇನೂ ಮಾಡಿಲ್ಲ. ಅಲ್ಲಿ ಒಬ್ಬ ಡಿ.ಎಫ್. ಓ. ಇದ್ದಾರೆ. ಆತನು ಒಬ್ಬ ವಿಚಿತ್ರ ವ್ಯಕ್ತಿಯೆಂದು ಕಾಣುತ್ತದೆ. ಹೇಡಿಯ ಕೈಗೆ ಚಂದ್ರಾಯುಧ ಕೊಟ್ಟಂತಾಗಿದೆ ಆತನಿಗೆ ಅಧಿಕಾರ ಕೊಟ್ಟಿರು

ವುದು. ಯಾರಾದರೂ ಒಬ್ಬ ಮೇಕೆ ಮೇಯುವ ಸೊಪ್ಪನ್ನು ತೆಗದುಕೊಂಡು ದಾರಿಯಲ್ಲಿ ಹೋಗು ತ್ತಿದ್ದಾಗ, ಅದನ್ನು ಈ ಡಿ. ಎಫ್. ಒ. ಕಂಡರೆ ಆತನನ್ನು ಹಿಡಿದು ಫೈನ್ ಹಾಕುತ್ತಾನೆ. ಸ್ವಾಮಿ, ಇನ್ನೊಂದು ವಿಚಾರ ಹೇಳುವುದಾದರೆ, ಗುಂಡ್ಲುಪೇಟೆಯಲ್ಲಿ ಒಬ್ಬ ಬಡವ ಮಾವಿನ ಸೊಪ್ಪನ್ನು ತೆಗೆದು ಕೊಂಡು ಹೋಗುತ್ತಿದ್ದ, ಆತನನ್ನು ಈ ವ್ಯಕ್ತಿ ಹಿಡಿದು ೫೦ ರೂಪಾಯಿ ಫೈನ್ ಹಾಕಿದ್ದಾನೆ. ಇನ್ನೊಬ್ಬ ತೀರಾ ಗರೀಬ, ಆತನ ಹತ್ತಿರ ಒಂದು ಜೊತೆ ಎತ್ತು, ಒಂದು ಗಾಡಿ ಇತ್ತು ಆತನು ತನ್ನ ಮನೆಯ ಹಿಂದೆ ಹಿತ್ತಲಲ್ಲಿ ಹುಲ್ಲು ಹಾಕಿಕೊಳ್ಳುವುದಕ್ಕೆ ಸ್ವಲ್ಪ ಜಾಗ ಇತ್ತು. ಅಲ್ಲಿ ಹುಲ್ಲು ಹಾಕಿಕೊಳ್ಳುವುದಕ್ಕೆ ೪ ಗೂಟ, ಸ್ವಲ್ಪ ಮುಳ್ಳು ತರುತ್ತಿದ್ದ. ಅವನನ್ನೂ ಕೂಡ ಹಿಡಿದು ಒಂದು ಸಾವಿರ ರೂಪಾಯಿ ಜುಲ್ಮಾನೆ ಹಾಕಿದ್ದಾರೆ. ಪಾಪ, ಆ ಬಡವ ತನ್ನ ಎತ್ತುಗಳನ್ನು ಮಾರಿ ಜುಲ್ಮಾನೆಯನ್ನು ಕಟ್ಟಿದ್ದಾನೆ. ನೀವು ನೋಡಿದರೆ ಒಂದು ಕಡೆ ಬಡವರನ್ನು ಬಡತನದ ರೇಖೆಯಿಂದ ಮೇಲಕ್ಕೆತ್ತಬೇಕೆಂದು ಹೇಳು ತ್ತಿದ್ದೀರಿ, ಇನ್ನೊಂದು ಕಡೆ ಈ ರೀತಿ ಬಡವರಿಗೆ ಜುಲ್ಮಾನೆ ಹಾಕುತ್ತಿದ್ದೀರಿ. ಹೀಗಾದರೆ ಆ ಬಡವ ಬದುಕುವುದಾದರೂ ಹೇಗೆ?

ಸ್ವಲ್ಪವಾದರೂ ಜಂಗಲ್‌ನಲ್ಲಿ ಇರುವವರಿಗೆ ನೀವೇ ತರಿಸಿ ಕೊಡದಿದ್ದರೆ ಅವರ ಕಷ್ಟವನ್ನು ಕೇಳುವ ವರು ಯಾರು ? ಇಷ್ಟೆಲ್ಲ ಕಷ್ಟ ಇದ್ದರೂ ಫಾರೆಸ್ಟ್ ಇಲಾಖೆಯು ಮುಖಾಂತರ ಜನರಿಗೆ ಏನೇನೂ ಅನುಕೂಲವಾಗದೆ ಇರುವುದನ್ನು ಹೇಳುವುದಕ್ಕೆ ಮನಸ್ಸಿಗೆ ಬಹಳ ನೋವಾಗುತ್ತಿದೆ. ಸರ್ಕಾರದಲ್ಲಿ ಯಾವಾಗಲೂ give and take policy ಇರಬೇಕು. ಫಾರೆಸ್ಟ್ ಇಲಾಖೆಯಿಂದ ಜನರಿಗೆ ಆಗುತ್ತಿ ರುವ ತೊಂದರೆಯನ್ನು ನಷ್ಟವನ್ನು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಕೂಡ ಫಾರೆಸ್ಟ್ ಆಫೀಸರ್ ಆಗಿ ಕೆಲಸಮಾಡಿರುತ್ತೇನೆ, ಫಾರೆಸ್ಟ್ ಇಲಾಖೆಯಿಂದ ಯಾವವಿಧವಾದ ಟ್ರ್ಯಾಜೆಡಿಯು ಇರಬಾರದು ನೀವು ಇಲಾಖೆಯ ವತಿಯಿಂದ ಏನು ಸಹಾಯ ಮಾಡಬೇಕೆಂದು ಉದ್ದೇಶವನ್ನು ಇಟ್ಟು ಕೊಂಡಿರುತ್ತೀರೋ ಅಷ್ಟು ಸಹಾಯವನ್ನು ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡ ಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

> "The programmes have been implemented in all villages with predominently Scheduled Caste population in each district in an intensified manner to provide lasting benefit to each family so as to enable the Scheduled Caste population to cross the poverty line in the shortest time."

ಇದು ಎಲ್ಲಿ ಸ್ವಾಮಿ ಇದೆ. ಫಾರೆಸ್ಟ್ ಇಲಾಖೆಯುವರು ಯಾರು ಯಾರು ಏನು ಅನುಕೂಲ ಮಾಡಿಕೊಡು ತ್ತಾರೆ ಸ್ವಾಮಿ. ಫಾರೆಸ್ಟ್ ಇಲಾಖೆಯಿಂದ ವರ್ಷವರ್ಷಕ್ಕೆ ಎಷ್ಟು ಉತ್ಪಾದನೆಯಾಗುತ್ತದೆ, ಎಷ್ಟು ಖರ್ಚಾಗುತ್ತದೆ ನೆಟ್‌ರೆವಿನ್ಯೂ ಏನು ಎನ್ನುವ ಬಗ್ಗೆ ತಮ್ಮ ಅನ್ಯುಯಲ್ ರಿಪೋರ್ಟ್‌ನಲ್ಲಿ ಕೊಟ್ಟೇ ಇಲ್ಲ. ನಮ್ಮ ಚಾಮರಾಜನಗರದಲ್ಲಿ ಸೌದೆ ಮತ್ತು ಬೊಂಬಿನ ಡಿಪೊ ಇಟ್ಟಿದ್ದೇವೆಂದು ರಿಪೋರ್ಟ್‌ನಲ್ಲಿ ಕೊಟ್ಟಿ ದ್ದೀರಿ. ಚಾಮರಾಜನಗರದಲ್ಲಿ ಸೌದೆ ಡಿಪೋನೂ ಇಲ್ಲ ಬೊಂಬಿನ ಡಿಪೋನೂಕೂಡ ಇಲ್ಲ. ಹೀಗಾದರೆ ಜನರ ತೊಂದರೆಯನ್ನು ಯಾವರೀತಿ ನೀಗುತ್ತೀರಿ ತಾವು ದಯವಿಟ್ಟು ಹೇಳಬೇಕು. I do not mean that he should be transferred from Chamrajnagar. So far as he is there, there will be some protection to forest. ಈ ರೀತಿ ಮಾಡಬಾರದು ಇಂತಿಂಥದ್ದಕ್ಕೆ ಇಷ್ಟಿಷ್ಟು ಫೈನ್ ಹಾಕಬೇಕು ಎನ್ನುವುದನ್ನು ದಯವಿಟ್ಟು ಫಿಕ್ಸ್ ಮಾಡಿಬಿಡಿ. ರೈತರನ್ನು ಹಾಳುಮಾಡ ಬೇಡಿ. ರೈತರು ಕಾಡಿನಿಂದ ನಾಲ್ಕು ಗೂಟಕ್ಕಾಗುವಷ್ಟು ಸೌದೆಯನ್ನು ಕೈಯಲ್ಲಿ ಹಿಡಿದುಕೊಂಡು ಬಂದರೆ ಒಂದು ಸಾವಿರ ರೂಪಾಯಿ ಜುಲ್ಮಾನೆಯನ್ನು ಹಾಕುತ್ತಿದ್ದೀರಿ. ಆ ಒಂದು ಸಾವಿರ ರೂಪಾಯಿ ಫೈನ್ ಕೊಡಬೇಕಾದರೆ ಅವನು ಎತ್ತುಗಳನ್ನು ಮಾರಿ ಕೊಡಬೇಕು. ಮತ್ತೆ ಅವನು ಎತ್ತುಗಳನ್ನು ಕೊಳ್ಳಬೇಕಾದರೆ ಏನು ಮಾಡಬೇಕು ನೀವೇ ಹೇಳಿ. ಅಂಥ ಒಂದು ವಿಚಿತ್ರವಾದ ವ್ಯಕ್ತಿಯನ್ನು ಫಾರೆಸ್ಟ್ ಆಫೀಸರ್ ಆಗಿ ನೇಮಿಸಿರುತ್ತೀರಿ. ಒಬ್ಬ ತಾಲೋಕ್‌ಬೋರ್ಡ್ ಮೆಂಬರ್ ಹೋಗಿ ಇಂಟರ್‌ವ್ಯೂ ಕೇಳಿದಕ್ಕೆ "ನೋ" ಇಂಟರ್‌ವ್ಯೂ ಕೊಡುವುದಿಲ್ಲವೆಂದು ಹೇಳಿದ್ದಾರೆ. ಪ್ರಜಾಪ್ರಭುತ್ವ ದಲ್ಲಿ ಇಷ್ಟೊಂದು ದಬ್ಬಾಳಿಕೆ ವರ್ತನೆ ಮಾಡುವುದು ಸರಿಯಲ್ಲ. ಇದು ಯಾವರೀತಿ ನ್ಯಾಯವೆಂದು ಕೇಳು

ತ್ತೇನೆ. ದಯವಿಟ್ಟು ಸ್ವಾಮಿ ಅವರನ್ನು ವರ್ಗ ಮಾಡದಿದ್ದರೂ ಚಿಂತೆ ಇಲ್ಲ ಅವರಿಗೆ ಇಂದಿಂಥದ್ದಕ್ಕೆ ಇಷ್ಟಿಷ್ಟು ಜುಲ್ಮಾನೆಯನ್ನು ಹಾಕಬೇಕೆಂದು ದಯವಿಟ್ಟು ನಿಗದಿಮಾಡಿ. ಒಂದುಗಾಡಿ ಸೌದೆಯನ್ನು ತಂದರೆ, ಅರ್ಧಗಾಡಿ ಸೌದೆಯನ್ನು ತಂದರೆ ಇಷ್ಟಿಷ್ಟು ಮರಮುಟ್ಟುಗಳನ್ನು ತಂದರೆ ಇಷ್ಟಿಷ್ಟು ಜುಲ್ಮಾನೆಯನ್ನು ಹಾಕಬೇಕೆಂದು ನಿಗದಿಮಾಡಿಬಿಡಿ. ರಾತ್ರೋರಾತ್ರಿ ಕಳ್ಳತನದಿಂದ ಚಾಮರಾಜನಗರ ಮತ್ತು ಯಳಂದೂರು ಫಾರೆಸ್ಟಿನಿಂದ ಮರಗಳನ್ನು ಕಳ್ಳತನದಿಂದ ತರುತ್ತಾರೆ ಅವರನ್ನು ಹಿಡಿಯು ತಕ್ಕಂಥ ತಾಕತ್ತು ಅವರಿಗೆ ಇಲ್ಲ. ಶಕ್ತಿ ಇಲ್ಲ. ಬಡವರು, ರೈತರು ರಸ್ತೆಯಲ್ಲಿ ಸೌದೆಯನ್ನು ತರುತ್ತಿದ್ದರೆ ಅವರನ್ನು ಹಿಡಿದುಕೊಂಡು ಜುಲ್ಮಾನೆ ಹಾಕುವುದು ಇವರ ಕೆಲಸವಾಗಿರುತ್ತದೆ. ಇಷ್ಟು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

ಶ್ರೀ ವಿ. ಮಸಿಯಪ್ಪ (ಚಿತ್ರದುರ್ಗ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಮಂಡಿಸಿರ ತಕ್ಕಂಥ ಕಾಡು ಮತ್ತು ಭೂಗರ್ಭ ವಿಜ್ಞಾನ ಖಾತೆಗೆ ಸಂಬಂಧಪಟ್ಟ ಬೇಡಿಕೆಯನ್ನು ನಾನು ಸಂಪೂರ್ಣ ವಾಗಿ ಬೆಂಬಲಿಸುತ್ತಾ ನನ್ನ ಕ್ಷೇತ್ರದಲ್ಲಿರತಕ್ಕಂಥ ಒಂದು ಗಣಿ ಅದು ಹೇಗೆ ನಡೆಯುತ್ತಿದೆ, ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ಕಾರ್ಮಿಕರಿಗೆ ಏನು ಅನ್ಯಾಯವಾಗುತ್ತಿದೆ. ಯಾವರೀಗೆ ತೊಂದರೆಯಾಗುತ್ತಿದೆ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಸ್ವಾಮಿ ಚಿತ್ರದುರ್ಗ ಜಿಲ್ಲೆ ಎಲ್ಲ ಕಾಲದಲ್ಲಿಯೂ ಕೂಡ ಬರಗಾಲಕ್ಕೆ ಒಳಗಾಗತಕ್ಕಂಥ ಪ್ರದೇಶ ವೆನ್ನುವುದು ದೇಶಕ್ಕೆ ಗೊತ್ತಿದೆ. ಇಂಥ ಪ್ರದೇಶಕ್ಕೆ ಅಪರೂಪಕ್ಕೆ ಬಂದು ರಾಜ್ಯ ಸರ್ಕಾರದ ವತಿ ಯಿಂದ ಇಂಗಳದಾಳದಲ್ಲಿ ತಾಮ್ರದಗಣಿ ಸ್ಥಾಪನೆಯಾಗಿರುತ್ತದೆ. ಈ ತಾಮ್ರ ಎನ್ನತಕ್ಕಂಥ ಲೋಹ ಇಡಿ ಭಾರತದಲ್ಲಿಯೇ ಅಪೂರ್ವವಾದಂಥ ಲೋಹ. ಇದು ಅನೇಕ ರಾಜ್ಯಗಳಲ್ಲಿ ಸಿಕ್ಕುವುದೇ ಇಲ್ಲ. ಅದರಲ್ಲೂ ಕರ್ನಾಟಕದಲ್ಲಿ ದೊರೆಯುತಕ್ಕಂಥ ಈ ತಾಮ್ರದ ಲೋಹಕ್ಕೆ ವಿಶೇಷವಾದ ಪ್ರಶಸ್ತ್ಯವಿರುತ್ತ ದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹೀಗಿರತಕ್ಕಂಥ ಪರಿಸ್ಥಿತಿಯಲ್ಲಿ ಸಾಕಷ್ಟು ಪ್ರೋತ್ಸಾಹ ಸಿಕ್ಕಬೇಕಾದಂಥ ಈ ಗಣಿಗೆ ಅದು ಸಿಕುತ್ತಿಲ್ಲ. ಮೇಲಾಗಿ ಇಲ್ಲಿ ಕೆಲಸಮಾಡತಕ್ಕಂಥ ಜನರಿಗೆ ಸಾಕಷ್ಟು ಅನುಕೂಲತೆಗಳಿಲ್ಲ. ಸರ್ಕಾರದ ವತಿಯಿಂದಲೇ ಆಗಲಿ ಈ ಒಂದು ಗಣಿಯನ್ನು ಅಭಿವೃದ್ಧಿ ಪಡಿಸತಕ್ಕಂಥ ವ್ಯವಸ್ಥೆಯೂ ಕೂಡ ಆಗಿಲ್ಲವೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸು ತ್ತೇನೆ.

ಈಗ ಗಣಿಯಲ್ಲಿ ಕೆಲಸ ನಡೆಯುತ್ತಿದೆ, ಸಾವಿರಾರು ಜನರು ಕೆಲಸ ಮಾಡುತ್ತಿರುತ್ತಾರೆ. ಇಲ್ಲಿ ಅದುರನ್ನು ತೆಗೆಯತಕ್ಕಂಥ ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ. ತೆಗೆದಂಥ ಅದುರನ್ನು ಶುದ್ಧತೆ ಮಾಡಿ ಅಪಗ್ರೇಡೆಡ್‌ಮಾಡಿ ೨೫ ಪರ್ಸೆಂಟ್ ಕಾನಸೆಂಟ್ರೇಟ್ ಮಾಡಿ ಈವತ್ತು ಅದನ್ನು ಘಾಟ್‌ಶಿಲಾ ಎನ್ನ ತಕ್ಕಂಥ ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತಿರುವ ಹಿಂದುಸ್ತಾನ್ ಕಾಪರ್ ಕಂಪೆನಿಗೆ ಶುದ್ಧವಾದ ಕಾಪರ್ ಮಾಡಲು ಕಳುಹಿಸಿಕೊಡುತ್ತಿರುತ್ತಾರೆ. ಹೀಗೆ ತಾಮ್ರದ ಅದುರನ್ನು ಕಳುಹಿಸಿಕೊಡ ತಕ್ಕಂಥ ಸಂದರ್ಭದಲ್ಲಿ ಅವರು ಘಾಟ್‌ಶಿಲಾ ಹಿಂದೂಸ್ತಾನ್ ಕಾಪರ್ ಕಂಪೆನಿಯವರು ಪ್ರತಿವರ್ಷ ಕೂಡ ೨೦–೪೦ ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ಎನ್ನುವ ರೀತಿಯಲ್ಲಿ ಧಾರಣೆಯನ್ನು ನಿಗದಿಮಾಡಿ ಕೊಡುತ್ತಿರುತ್ತಾರೆ. ಇದೇ ಸಂದರ್ಭದಲ್ಲಿ ಹಿಂದೂಸ್ಥಾನ್ ಕಾಪರ್ ಕಾರ್ಪೊರೇಷನ್‌ನವರು ಅವರೇ ಉತ್ಪಾದನೆ ಮಾಡತಕ್ಕಂಥ ಅದುರು ಏನು ಇರುತ್ತದೆ ಅದನ್ನು ಮೆಟ್ರಿಕ್‌ಟನ್‌ಗೆ ೧೨ ಸಾವಿರ ರೂಪಾಯಿ ಗಳಿಗೆ ಖರ್ಚುಮಾಡಲು ತಯಾರಾಗಿದ್ದಾರೆ. ಸ್ವಾಮಿ ಈವತ್ತು ಹೋದವರ್ಷದ ಲೆಕ್ಕದಪ್ರಕಾರ ಮೆಟ್ರಿಕ್ ಟನ್ ಕಾಪರ್‌ಗೆ ೭ ಸಾವಿರ ರೂಪಾಯಿ ಕಾಸ್ಟ್ ಆಫ್ ಪ್ರೊಡಕ್ಷನ್ ಖರ್ಚು ಬಂದಿದೆ. ಭಾರತ ದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಇರತಕ್ಕಂಥ ಒಂದು ತಾಮ್ರದ ಗಣಿಯಲ್ಲಿ ಉತ್ಪಾದನೆಯಾಗತಕ್ಕಂಥ ಒಂದು ಅದುರಿಗೆ ಒಂದು ಮೆಟ್ರಿಕ್‌ಟನ್‌ಗೆ ೭ ಸಾವಿರ ರೂಪಾಯಿ ಕಾಸ್ಟ್ಆಫ್ ಪ್ರೊಡಕ್ಷನ್ ಕೊಟ್ಟಿ ದ್ದಾರೆ ಹಿಂದುಸ್ಥಾನ್ ಕಂಪೆನಿಯವರು ಈ ರೀತಿ ನಿಗದಿಗೊಳಿಸಿರತಕ್ಕಂಥದ್ದು ನಮಗೆ ಅರ್ಥವಾಗುತ್ತಿಲ್ಲ. ಸುಮಾರು ೧೯೭೫ನೇ ಇಸವಿಯಿಂದ ಹಿಡಿದು ೭–೮ ವರ್ಷದಿಂದಲೂ ನಷ್ಟದಲ್ಲಿಯೇ ಚಿತ್ರದುರ್ಗದಲ್ಲಿರುವ ಗಣಿಯು ನಡೆಯುತ್ತಿದೆ. ಈ ಒಂದು ಸ್ಥಿತಿಯಲ್ಲಿರುವುದರಿಂದ ಈ ಗಣಿಯನ್ನು ಮುಚ್ಚತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ಅಭಾವ ಪ್ರದೇಶದಲ್ಲಿರತಕ್ಕಂಥ ಈ ಗಣಿಯಲ್ಲಿ ಕೂಲಿ ಮಾಡುತ್ತಿರತಕ್ಕಂಥ ಸಾವಿರಾರು ಜನ ಕಾರ್ಮಿಕರಿಗೆ ಉದ್ಯೋಗವನ್ನು ಕೊಟ್ಟಿರತಕ್ಕಂಥ ಗಣಿ ನಷ್ಟವನ್ನು ಭರಿಸಲಾರದೆ ಗಣಿ ಯನ್ನೇ ಮುಚ್ಚತಕ್ಕಂಥ ಪರಿಸ್ಥಿತಿ ಬಂದಿದೆ.

೧೨-೩೦ ಪಿ.ಎಂ.

ಇಂಥಹ ಒಂದು ಸಂದರ್ಭದಲ್ಲಿ ಇವತ್ತು ಹಿಂದೂಸ್ಥಾನ ಕಾಪರ್ ಕಂಪನಿಯ ಹತ್ತಿರ ನಮ್ಮ ರಾಜ್ಯ ಸರ್ಕಾರದವರು ಸರಿಯಾದ ರೀತಿಯಲ್ಲಿ ವ್ಯವಹಾರ ನಡೆಸಿ, ಅಂಕಿಅಂಶಗಳನ್ನು ತೆಗೆದುಕೊಂಡು ಪ್ರಯತ್ನ ಮಾಡಿದರೆ, ಏನು ಪ್ರೊಡಕ್ಷನ್ ಆಗಿದೆ ಅದರಲ್ಲಿ ೫-೧೦ ಪರ್ಸೆಂಟ್ ಲಾಭಾಂಶ ಇಟ್ಟು ನಮಗೆ ಕೊಟ್ಟರೆ ಇವತ್ತು ಚಿತ್ರದುರ್ಗದ ಕಾಪರ್ ಕಂಪೆನಿಯವರು ಇಂಗಾಳದಾಳ ಗಣಿಯಲ್ಲಿ ಲಾಭದಾಯಕವಾಗಿ ಕೆಲಸ ಮಾಡಿ ಹೆಚ್ಚಿನ ಉದ್ಯೋಗಗಳನ್ನು ಒದಗಿಸಿಕೊಡಬಹುದಾಗಿದೆ. ಕರ್ನಾಟಕದಲ್ಲಿ ಇರತಕ್ಕ ತಾಮ್ರದ ಗಣಿಗಳು ಎಂದರೆ, ಹಾಸನದ ಕಲ್ಯಾಣಿ, ಹಾಲಹಳ್ಳಿ ಮತ್ತು ರಾಯಚೂರಿನ ಕಲ್ಲೂರು ಮತ್ತು ಮಂಚನೂರು ಇಲ್ಲೆಲ್ಲಾ ಕೆಲಸಗಳನ್ನು ನಡೆಯುತ್ತಿವೆ. ಹಿಂದೂಸ್ಥಾನ್ ಕಾಪರ್ ಕಂಪೆನಿಯವರು ೨೫ ಪರ್ಸೆಂಟ್ ಅಪ್‌ಗ್ರೇಡೆಡ್ ಕಾನ್‌ಸಂಟ್ರೇಟ್ ಕಳುಹಿಸುವುದನ್ನು ನಿಲ್ಲಿಸಿಬಿಟ್ಟು, ಕಲ್ಯಾಣಿ, ಹಾಲದಳ್ಳಿ, ಕಲ್ಲೂರು ಹಾಗೂ ಮಚನೂರಿನಿಂದ ಬರತಕ್ಕ ಅದುರನ್ನು ಇಲ್ಲೇ ಕಲೆ ಚಿತ್ರದುರ್ಗದಲ್ಲೇ ಶೇಖರಿಸಿ ಒಂದು ಪೂರ್ಣ ಪ್ರಮಾಣದ ತಾಮ್ರವನ್ನು ಮಾಡತಕ್ಕ ಕಾರ್ಖಾನೆಯನ್ನು ನಾವೇ ಸ್ಥಾಪಿಸಿದರೆ ಸುಮಾರು ೧ ಟನ್‌ಗೆ ೩೪,೦೦೦ ರೂಪಾಯಿ ಸಿಗುತ್ತದೆ. ೩೪ ಸಾವಿರ ರೂಪಾಯಿ ಬೆಲೆಯ ತಾಮ್ರವನ್ನು ತಯಾರಿ ಮಾಡಬೇಕಾದರೆ ನಾವು ಎಲ್ಲಾ ಈ ಕಂಪನಿಗಳಿಗೆ ಲಾಭ ಸಿಗತಕ್ಕ ರೀತಿಯಲ್ಲಿ ಕೊಟ್ಟು ತಾಮ್ರದ ಗಣಿಯನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಅವಕಾಶ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯವನ್ನು ಕೇಂದ್ರ ಸರ್ಕಾರದವರಲ್ಲಿಗೆ ತೆಗೆದುಕೊಂಡು ಹೋಗಿ ಅವರಿಂದ ನ್ಯಾಯವಾದ ಧೋರಣೆ ನಮ್ಮ ಕಾಸ್ಟ್ ಆಫ್ ಪ್ರೊಡಕ್ಷನ್ ಬೇಸ್ಡ್ ಪ್ರೈಸ್, ಮೆಟೀರಿಯಲ್ಲಿ ಪ್ರೈಸಿಂಗ್ ಪಾಲಿಸಿ ಮಾಡಿ ಸರಿಯಾದ ಧೋರಣೆ ಸಿಗುವಹಾಗೆ ಮಾಡಬೇಕು. ಇದು ಸಾಧ್ಯ ಇಲ್ಲದಿದ್ದರೆ, ಕರ್ನಾಟಕದಲ್ಲಿ ಪೂರ್ಣ ಪ್ರಮಾಣದ ತಾಮ್ರವನ್ನು ಉತ್ಪಾದನೆ ಮಾಡತಕ್ಕ ಕಾರ್ಖಾನೆಯನ್ನು ನಮ್ಮ ಇಂಗಳದಾಳದಲ್ಲಿ ಸ್ಥಾಪನೆ ಮಾಡಿ, ಕರ್ನಾಟಕದಲ್ಲಿ ತಾಮ್ರದ ಒಂದು ಉದ್ಯಮ ಯಶಸ್ವಿಯಾಗಿ ನಡೆಯುವುದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಹಾಗೂ ಈ ಗಣಿಯಿಂದಾಗಿ ರೈತರಿಗೆ ಆಗಿರುವ ಒಂದೆರಡು ತೊಂದರೆಗಳ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತೇನೆ. ಏನೆಂದರೆ, ಈ ಗಣಿ ಅದುರನ್ನು ಸಂಸ್ಕರಿಸುವಾಗ ಏನು ಎಮಲ್‌ಷನ್ ಕಲ್ಲು ಸೀಮಿತ ಧೂಳು ಬರುತ್ತದೆ, ಆ ಧೂಳು ಸುತ್ತಮುತ್ತಲ ಹೊಲದ ಮೇಲೆ ಬಿದ್ದು ಒಂದು ಸಿಮೆಂಟ್ ಹೊದಿಕೆಯನ್ನು ಹಾಸಿದಂತಾಗಿರುವುದರಿಂದ ಅಲ್ಲಿ ರೈತ ಬೆಳೆ ಬೆಳೆಯುವುದಕ್ಕೆ ಬಹಳ ಕಷ್ಟವಾಗಿದೆ. ಈ ಗಣಿಯನ್ನು ತೋಡುವಾಗ ಭೂಮಿಯ ಕೆಳಗೆ ಹರಿಯುತಕ್ಕ ನೀರಿಗೆ ಅಡಚಣೆಯಾಗಿ, ಕೆಳಭಾಗದಲ್ಲ ಇರತಕ್ಕ ಐದಾರು ಹಳ್ಳಿಗಳ ೫೦೦-೬೦೦ ಬಾವಿಗಳು ಒಣಗಿ ಹೋಗಿರುತ್ತವೆ. ಇದರಿಂದಾಗಿ ಹೂವು, ಹಣ್ಣುಗಳನ್ನು ಬೆಳೆಯತಕ್ಕ, ಹತ್ತಾರು ಸಾವಿರ ಬೆಲೆ ಬಾಳತಕ್ಕ ಭೂಮಿ ಹಾಳಾಗಿರತಕ್ಕ ಪರಿಸ್ಥಿತಿ ಇದೆ. ಇದರಿಂದಾಗಿ ರೈತರಿಗೆ ಆಗಿರತಕ್ಕ ಅನ್ಯಾಯವನ್ನು ಸರ್ಕಾರ ಪರಿಶೀಲಿಸಿ ಅವರ ಕಷ್ಟ ನಿವಾರಣೆ ಮಾಡುವುದರ ಬಗ್ಗೆ ಆಲೋಚಿಸಬೇಕೆಂದು ಹೇಳುತ್ತೇನೆ. ಈ ಒಂದು ಅನ್ಯಾಯಕ್ಕೆ ಪರಿಹಾರವನ್ನು ಕಾಪರ್ ಕಂಪನಿಯವರೇ ಈಗ ಕೊಡುವುದಕ್ಕೆ ಸಾಧ್ಯವಾಗುತಾ ಇಲ್ಲ. ಇವರು ರೈತರಿಗೆ ಆಗಿರತಕ್ಕ ಅನ್ಯಾಯಕ್ಕೆ ಕಾಂಪಂಸೇಷನ್ ಕೊಡಬೇಕಾದರೆ, ಇವರ ಪ್ರೊಡಕ್ಷನ್‌ಗೆ ಒಳ್ಳೆಯ ಧಾರಣೆ ಸಿಗಬೇಕಾಗುತ್ತದೆ. ಆ ರೀತಿ ಧಾರಣೆ ಸಿಗುವುದಾದರೆ ಏನೇನು ಪರಿಹಾರ ಕೆಲಸಗಳನ್ನು ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ಅವರೇ ತೆಗೆದುಕೊಳ್ಳುತ್ತಾರೆಂದು ನಾನು ಹೇಳುತ್ತೇನೆ. ಅದ್ದರಿಂದ ತಾವು ಮೂಲತ: ಆ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಪ್ರಯತ್ನ ಮಾಡಬೇಕು. ಒಂದು ವೇಳೆ ಆ ಬಗ್ಗೆ ನೀವು ಯಶಸ್ವಿ ಆಗದಿದ್ದರೆ ಆಗ ತಾವೇ ಒಂದು ತಾಮ್ರ ತಯಾರು ಮಾಡತಕ್ಕ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಕೈಗಾರಿಕೆಯಲ್ಲಿ ಹಿಂದುಳಿದಿರತಕ್ಕ ಚಿತ್ರದುರ್ಗ ಜಿಲ್ಲೆಗೆ ಒಂದು ದೊಡ್ಡ ಕಾರ್ಖಾನೆಯನ್ನು ದೊರಕಿಸಿಕೊಟ್ಟಹಾಗೆ ಆಗುತ್ತದೆಂದು ನಾನು ಸಲಹೆ ಮಾಡುತ್ತೇನೆ. ಇದರಿಂದ ಸಾವಿರಾರು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಹಾಗೆ ಆಗುತ್ತದೆ. ಈ ಬಗ್ಗೆ ಸರ್ಕಾರ ತ್ವರಿತವಾದ ಕ್ರಮವನ್ನು ಹಾಕಿಕೊಳ್ಳಲಿ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI WILLIAM ST. JOHN SINCLAIR MARLEY (Nominated).—Mr. Deputy Speaker, Sir, I have read with great interest, this report that has been given to us and on the strength of this report. I

should like to dwell on four or five points and give some suggestions to the Government on these points:

The first thing that worries me is that we are very very far below the percentage on a national level and even with regard to the states. Of course, it goes on in the report to say that certain steps are being taken for more afforestation and for planting of trees and things of that nature. One has to wait and see as to whether all these will be fulfilled in the time that lies ahead of us. But here, I would just like to speak on one point. Some Members have touched on it already, with regard to the staff of the Forest department. Is it just that we take people on a paper value ? Do we employ people who are really interested in the forest work, in the wild life of the country ? It is only the people of this nature are who dedicated with this type of work that are really going to help the country in achieving the target that has been set with regard to theflora and fauna of our country ? One of the greatest assets that any country has is flora and fauna. If we do not look after these things today, in the next twenty years, our people are going to curse us because we will never be able to, replace these tremendous wealth and heritage which have been given to us. So, I request the Government to consider this very important matter of employing the correct type of people because if you are interested in this type of a job, you will put up with any inconvenience since it is some thing that you are set on. I would again request the Government to consider this very seriously when the question of recruitment come around.

Sir, I should then like to go to page 16 of the Report which deals with Firewood. In this House, for the years that I have been here, there is a constant complaint from various people about the tremendous shortage of Firewood. As per the project demand, in 2000 A.D., the requirement of Firewood will be 13 Million Cubic Metres. But here, the present Firewood requirement is about 9.25 Million Cubic Metres as against the present production of 1.9 Million Cubic Metres. I cannot just understand as to how you are going to reconcile these figures. Today, against a demand of 9.25 Million Cubic Metres, you are just in a position to supply 1·9 Million Cubic Metres and how are you going to meet the demand of 13 Million Cubic Metres in another 19 years. I would like the Goverument to let us know as to what are the plans they have put forward. You have mentioned in the Report that you are going to plant trees on tank beds, you are going to plant them here and you are going to plant somewhere. But with what I have seen, I am very sorry to state that it is very nice giving the people Seedlings and planting

them and after that when you go after two months, they are dead. I have spoken on this before. Surely, you have to look after the Seedlings, you have to nurture them. It is like nursing our children. Do not say that we just have the children and we do not feed them and we do not nurture them. You have got to nurture the trees. What is the use of giving some 373 lakhs Seedlings ? I would like to know from the Government as to what follow-up there is to see that these seedlings are nurtured, how do they mature and how they are cared for. Is it just a matter of somebody taking on a contract basis and just planting so many Millions of Seedlings and therefore he is not interested because if half or three quarters die, he has another contract to plant some more Seedlings. I do not know.

I do not know. This is a question I would like to be answered to.

The other point is about eucalyptus wood. I saw in today's papers. Unfortunately I was not in the House yesterday when this matter came up. But I think this has been spoken about in the House previously. Harihar Polyfibres I understand, have got a contract for thirty-one years. At a fantastic, what should I say, foolish price they are getting this eucalyptus wood and are producing polyester from it making a colossol profit. And the State Government, I understand, and one of the hon. Members told me, is losing some where near Rs. 4 crores a year. I stand to be corrected on this figure. But if it is so, I think, time has now come that the Government should really look into this Contract again and see what can be done. The Government will have to have a dialogue with these people and come to some sort of settlement that there should be a rise in the price that is being paid to the Government at the moment because I think it is nothing e se but downright cheating. I am sorry to use all these words but I do not see any reason why the Government should lose this colossal sum of money just because somebody signed a contract for a period of thirty-one years.

As time is short, I would just like to dwell on two suggestions I should like to make to the Government i.e., with regard to our Zoos. Some of you might have read an article in the paper about the appalling conditions of the animals and brides in. Zoo in Mysore and what eventually happened. Here again I say that the people concerned the correct word is 'Curator of Zoo' may be a dedicated person. But what about the other people that are responsible for these animals ? And don't you think today of Zoos where animals and birds can really

roam in somewhat their natural habitent? We are hearing about the Maharaj's Palace which, I think, has five hundred acres of land. Why can't the Government think of making that in to a beautiful Safari Park? It can be done. It just needs a little imagination. But here I would like to give a word of caution. If a thing like this is considered, I do hope that we need not have a ommittee formed and that Committee to go abroad and visit Germany, this place and that place and come back and then get the ideas. I am sure we have enough people in our country who would be able to give excellent ideas. It could easily be turned into a beautiful Safari Park. Look at Bannera-ghatta. I am so sad to say about that. Those beautiful lion cubs! What happened to them? Some foolish person allowed the dry trees of eucalyptus where the bark peels off and these poor animals simply tow their pows to shurbs and they had to die, because you do not have even trunk grown. Is this the way to run our Forest Department? It is shocking to me. Is it that we have no love for these dumb animals and treat them in such a shocking manner? In a developed park if the children go there, they can see the animals in their natural habi-tant. They will then learn to love these animals. . We will inculcate in them love for animals and birds and theus we will help ourselves. This is where must concentrate. This is where we must have children interested in planting trees-why do they plant trees, what does a tree mean to them and to the feture of the country, what does the fauna mean for this country. Is it that they will come and see the animals in the Zoo behind bars? I mean how do you feel if you are put behind bars and people or animals looking at you and say, "This is homo sapine"? Just think the situation and then you will appreciate what our dumb friends are going through.

The lost point I would like to make is-I hope I am pronouncing the word correctly-Vanamahostava i.e., planting trees. I do hope that the Government will really look into this matter. Let us have the planting of trees at a time when we have natural rains to support their growth. Don't let us have it at a time when there will be no rains and all the plonts just dry up.

With these few words, I thank you for giving me the opportunity ofspeaking.

MR. DEPUTY SPEAKER.—Hon. Member Shaffi Ahmed...Will you concluded within five minutes?

ಶ್ರೀ ಎಸ್. ಷಫಿ ಅಹ್ಮದ್.—(ತುಮಕೂರು) ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಮತ್ತು ಭೂ ಗಣಿ ವಿಜ್ಞಾನ ಮಂತ್ರಿಗಳಾದ ಶ್ರೀ ಜಿ. ಮಾದೇಗೌಡರು ತಂದಿರತಕ್ಕ ಡಿಮಾಂಡ್‌ಗೆ ಅಭಿನಂದನೆಯನ್ನು ಸಲ್ಲಿಸಿ, ನನ್ನ ಎರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಹರಿಹರ ಪಾಲಿಫೈಬರ್ಸ್ ಬಗ್ಗೆ ಸಾಕಷ್ಟು

ಸದಸ್ಯರುಗಳು ಹೇಳಿದ್ದಾರೆ. ಆದರೂ ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಹರಿಹರ ಪಾಲಿಫೈಬರ್ಸ್ ಬರೀ ರಾಯಲ್ಟಿ ಬಗ್ಗೆ ಅಷ್ಟೆ ಅಲ್ಲ, ಅದರ ವರ್ಕಿಂಗ್ ಕಂಡಿಷನ್ ಸಹ ಸರಿಯಿಲ್ಲ. ಇಲಾಖೆಯವರು ಪ್ಲಾಂಟೇಷನ್‌ಗೆ ವಿಸಿಟ್ ಮಾಡಿ, ಆಗುತ್ತಿರುವ ಒಂದು ಇರೆಗ್ಯೂಲಾರಿಟೀಸ್ ಅನ್ನು ಸೆಟ್‌ರೇಟ್ ಮಾಡಬೇಕು. ಈಗ ಸರ್ಕಾರದವರು ಇವರಿಗೆ ೮೧ ಸಿಎಫ್‌ಟಿ ಸ್ಟ್ಯಾಗ್ ವ್ಯವಸ್ಥೆ ಕೊಟ್ಟು ಪರ್ಮಿಷನ್ ಕೊಟ್ಟಿದ್ದಾರೆ. ೩:೩:೯ ಆದರೆ ೯೦ ಸಿಎಫ್‌ಟಿ ಕೊಡುತ್ತಿದ್ದಾರೆ. ಎಕ್ಸ್ಟ್ರಾಸ್‌ನಲ್ಲಿ ಇರೆಗ್ಯೂಲಾರಿಟೀಸ್ ಸಹ ನಡೆಯುತ್ತಿದೆ. ಈಗ ಸ್ಟ್ಯಾಗ್ಸ್ ಪಾಸಿಂಗ್ ಆಗುವಾಗ ಒಂದು ಪ್ಲಾಂಟೇಷನ್‌ನಲ್ಲಿ ೫೦೦ ಸ್ಟ್ಯಾಗ್ಸ್ ಇದ್ದರೆ ೬೦೦ ಸ್ಟ್ಯಾಗ್ಸ್ ಎಂದು ಪಾಸ್ ಮಾಡಿ ಅಕ್ರಮವಾಗಿ ಸಾಗಾಣಿಕೆ ಸಹ ಮಾಡುತ್ತಿದ್ದಾರೆ. ಒಬ್ಬ ಸಾಮಾನ್ಯ ರೈತ ಒಂದು ನೇಗಿಲು ತುಗಡಿಗೆ ತೆಗೆದುಕೊಂಡುಹೋದರೆ ಸರ್ಕಾರದವರೂ ಮತ್ತು ಅಧಿಕಾರಿಗಳು ಅವರ ಮೇಲೆ ತೀವ್ರ ಕ್ರಮ ಕೈಗೊಳ್ಳುತ್ತಾರೆ. ಆದರೆ, ಇಂತಹ ದೊಡ್ಡ ಮಾಲೀಕರು ಈ ರೀತಿ ಅನ್ಯಾಯ ಮಾಡುತ್ತಿರುವುದು ಬಹಳ ತಪ್ಪು. ಇನ್ನೊಂದು ವಿಶೇಷವೇನೆಂದರೆ ಮೈಸೂರು ಪೇಪರ್ ಮಿಲ್ಸ್ ನಮ್ಮದೇ ಆಗಿರುವ ಒಂದು ಕಾರ್ಖಾನೆ. ಅದಕ್ಕೆ ಬೇಕಾಗಿರುವ ಕಚ್ಚಾ ಪದಾರ್ಥ ವರ್ಷಕ್ಕೆ ಸುಮಾರು ಒಂದೂವರೆ ಟನ್ ಯೂಕಲಿಫ್ಟ್ಸ್ ಬೇಕಾಗುತ್ತದೆ, ಆದರೆ ನಮ್ಮ ಸರ್ಕಾರ ೮೮ ಸಾವಿರ ಟನ್ ಅಲಾಟ್‌ಮೆಂಟ್ ಕೊಟ್ಟಿದೆ. ಕಚ್ಚಾಪದಾರ್ಥಗಳನ್ನು ಮೈಸೂರು ಪೇಪರ್ ಮಿಲ್‌ಗೆ ಒದಗಿಸಲು ಸುಮಾರು ಒಂದು ಕೋಟಿ ರೂಪಾಯ ಖರ್ಚು ಬರಬಹುದು; ಸರ್ಕಾರ ಅದಕ್ಕೆ ಬಂಡವಾಳ ಹಾಕಿದೆ; ಏತಕ್ಕೆ ಒಧಗಿಸಬಾರದು? ಕಚ್ಚಾಪದಾರ್ಥ ನಮ್ಮಲ್ಲಿ ಕಡಿಮೆ ಇರುವುದರಿಂದ ಹೊರದೇಶಗಳಿಂದ ಕಚ್ಚಾಪದಾರ್ಥದ ಬಲ್ಕ್ ತಂದು ಪೇಪರ್ ಮಾಡುವ ಸಲಹೆಯನ್ನು ಸರ್ಕಾರಕ್ಕೆ ಕೊಡಲಾಗಿದೆ ಎಂದು ತಿಳಿದಿದ್ದೇನೆ. ಬೇರೆ ಕಡೆಯಿಂದ ಕಚ್ಚಾಪದಾರ್ಥಗಳನ್ನು ತರಿಸಿಕೊಂಡು ಪೇಪರ್ ಮಾಡಲು ಪ್ರಿಯಾರಿಟಿ ಕೊಡುವುದು ಪ್ರವೇಟ್‌ನವರು ಬೇರೆ ಕಡೆಯಿಂದ ರಾ ಮೆಟಿರಿಯಲ್ಸ್ ತರಲು ಪರ್ಮಿಷನ್ ಕೊಡುವದಕ್ಕೆ ಬದಲಾಗಿ, ನಮ್ಮದೇ ಆದ ರಾ ಮೆಟಿರಿಯಲ್ಸ್‌ನ್ನು ಹೆಚ್ಚಿನಮಟ್ಟದಲ್ಲಿ ಪೇಪರ್ ಮಿಲ್ಸ್‌ಗೆ ಕೊಟ್ಟರು ಒಳ್ಳೆಯ ಆದಾಯ ಬರುತ್ತದೆ. ಈಗ ಬೆಂಗಳೂರು ನಗರದಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಒಂದು ಒಳ್ಳೆಯ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಬೆಂಗಳೂರು ನಗರದಲ್ಲಿ ಖಾಲಿಯಿರುವ ನಿವೇಶನಗಳಲ್ಲಿ ಫ್ರಿ ಡಿಸ್ಟ್ರಿಬ್ಯೂಷನ್ ಆಫ್ ಸೀಡ್ಲಿಂಗ್ಸ್, ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ, ಕಾರ್ಪೊರೇಷನ್‌ಗೆ ಸೇರಿದ ಖಾಲಿಯಿರುವ ಜಾಗದಲ್ಲಿ ಸರ್ಕಾರದವರೇ ಅಂಡರ್‌ಟೇಕಿಂಗ್ ಮಾಡಿಕೊಂಡು ಎಲ್ಲಾ ಪ್ಲಾಂಟೇಷನ್ ಮಾಡಿದರೆ, ಬೆಂಗಳೂರು ನಗರ ಹೆಚ್ಚು ಸುಂದರವಾಗುತ್ತದೆ. ಎಕ್ಸ್ಟೆನ್‌ಸನ್ ಸ್ಟ್ಯಾಂಡ್‌ನಲ್ಲಿ ೫೦ ಪರ್‌ಸೆಂಟ್ ಕಾಸ್ಟ್ ಏನಾಗಿರುತ್ತದೆ ಅದನ್ನು ಪಡೆದು, ನಗರವನ್ನು ಸುಂದರಪಡಿಸಬಹುದು.

ಈ ನಗರವನ್ನು ಸುಂದರವನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಈ ಒಂದು ರಿಪೋರ್ಟಿನಲ್ಲಿ ಸುಮಾರು ೧೫೦೦ ಸಾವಿರ ಕಿಲೋ ಮೀಟರ್ ಅಷ್ಟು ರೋಡ್‌ಸೈಡ್ ಪ್ಲಾಂಟೇಷನ್ ಮಾಡಿದ್ದೇವೆ ಅಂತ ಕೊಟ್ಟಿದ್ದಾರೆ. ಆದರೆ ನಮ್ಮ ಕರ್ನಾಟಕದಲ್ಲಿ ಈ ರೋಡ್‌ಸೈಡ್ ಪ್ಲಾಂಟೇಷನ್ ಸ್ವಲ್ಪ ಮಟ್ಟಿಗೆ ನಡೆದಿದ್ದರೂ ಕೂಡ ಅದರಲ್ಲಿ ಬಹುಮಟ್ಟಿಗೆ ಫೈಲ್ಯೂರ್ ಆಗಿದೆ. ಒಳ್ಳೆಯ ಪ್ಲಾಂಟೇಷನ್ಸ್ ಬಂದಿರುವ ಜಾಗದಲ್ಲಿ ಪ್ರೊಟೆಕ್ಷನ್ ಮಾಡಿದರೆ ಅವು ಇನ್ನೂ ಚೆನ್ನಾಗಿ ಬರುತ್ತದೆ. ಅಂಥಾವಕ್ಕೆ ತಾವು ಪ್ರೊಟೆಕ್ಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಫ್ರಿ ಡಿಸ್ಟ್ರಿಬ್ಯೂಷನ್ ಆಫ್ ಸೀಡ್ಲಿಂಗ್ಸ್ ವಿಚಾರದಲ್ಲಿ ಹೇಳಬೇಕಾದರೆ ೨-೩ ಕೋಟಿ ರೂಪಾಯಿಯಷ್ಟು ಸೀಡ್ಲಿಂಗ್ಸ್ ಅನ್ನು ಕೊಟ್ಟಿದ್ದರೂ ಕೂಡ ನಮ್ಮ ತುಮಕೂರು ಜಿಲ್ಲೆಗೊಂದಕ್ಕೇನೇ ಸುಮಾರು ೧½ ಕೋಟಿ ಸೀಡ್ಲಿಂಗ್ಸ್‌ಗೆ ಡಿಮ್ಯಾಂಡ್ ಇದೆ ಅನ್ನುವ ಮಾತನ್ನು ಹೇಳುತ್ತೇನೆ. ಆದುದರಿಂದ ಈ ಸೀಡ್ಲಿಂಗ್ಸ್ ಅನ್ನು ಇನ್ನೂ ಹೆಚ್ಚಿಗೆ ಮಾಡಿ ರೈತರಿಗೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈಗ ೩೩ ಪರ್ಸೆಂಟ್ ಅಷ್ಟು ಫಾರೆಸ್ಟ್ ನಮ್ಮಲ್ಲಿ ಕೊರತೆ ಏನು ಅದನ್ನು ಈ ರೀತಿಯಾಗಿ ಬೆಳೆಸುವುದಕ್ಕೆ ಸಾಧ್ಯ ಇದೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಈ ಪ್ಲಾಂಟೇಷನ್ಸ್ ಅನ್ನೂ ಮತ್ತು ಫಾರೆಸ್ಟ್ ಅನ್ನೂ ಬೆಳೆಸುವ ಹಾಗೆ ಮಾಡಿದರೆ ನಮ್ಮ ರೈತರಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗುವುದಲ್ಲದೆ ಈ ಪ್ಲಾಂಟೇಷನ್ಸ್ ಅನ್ನು ಇನ್ನೂ ಹೆಚ್ಚು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಬಹಳ ಜನ ರೈತರು ಮುಂದೆ ಬರುತ್ತಾರೆ. ಅವರಿಗೆ ತಾವು ಇನ್ನೂ ಹೆಚ್ಚುಮಟ್ಟಿಗೆ ಈ ಫ್ರೀ ಸೀಡ್‌ಲಿಂಗ್ಸ್ ಅನ್ನು ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಮಾಫಿ ಪಾಸ್ ಬಗ್ಗೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಈ ಮಾಫಿ ಪಾಸನ್ನು ಸರ್ಕಾರದಿಂದ ಪಡೆಯಬೇಕಾದರೆ ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ಸ್‌ನ ರೆಕಾರ್ಡ್ ನೋಡಿ ಈ ಒಂದು ಮಾಫಿ ಪಾಸ್ ಅನ್ನು ಅವರು ಪಡೆಯಬೇಕಾಗಿದೆ. ಅದರಲ್ಲೂ ನಮ್ಮ ಮೈದಾನ ಏರಿಯಾದಲ್ಲಿ ಇದನ್ನು ಪಡೆಯ ಬೇಕಾದರೆ ಬಹಳ ಕಷ್ಟವಾಗಿದೆ. ಏತಕ್ಕೆಂದರೆ ನಮ್ಮ ಮೈದಾನ ಏರಿಯಾಕ್ಕೂ ಮತ್ತು ಮಲೆನಾಡು ಏರಿಯಾಕ್ಕೂ ಸರಿಯಾದ ಒಂದು ಡೆಮಾರ್ಕೇಷನ್ ಇಲ್ಲಾ. ಈ ಕಾರಣ ದಿಂದ ರೈತ ಮರ ಕಡಿದು ಅದನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳ ಬೇಕಾದರೆ ಬಹಳ ಅನಾನುಕೂಲ ವಾಗಿದೆ. ನಾನು ಈ ಬಗ್ಗೆ ನೋಡಿಕೊಂಡು ಬಂದಿದ್ದೇನೆ. ಸುಮಾರು ೨೦-೩೦ ಲಾರಿಗಳನ್ನು ಹಿಡಿದು ಕೊಂಡು ಬಂದು ಕಾಂಪೌಂಡ್ ಮಾಡಿ ಅವರ ಬಂಗಲೆಯಲ್ಲಿ ನಿಲ್ಲಿಸಿದ್ದಾರೆ ನಾನು ನೋಡಿದ್ದೇನೆ. ಬಹಳ ದಿವಸಗಳಿಂದ ಈ ಒಂದು ಪದ್ಧತಿಯನ್ನು ಮಾಡಿಕೊಂಡು ಬಂದು ಈಗ್ಗೆ. ಒಂದು ತಿಂಗಳಿನಿಂದ ಈಚೆಗೆ ಸುಮಾರು ನೂರಾರು ಲಾರಿಗಳನ್ನು ಕಾಂಪೌಂಡ್ ಮಾಡುತ್ತಿದ್ದಾರೆ. ಇದಕ್ಕೆ ಏನು ಕಾರಣ ಅನ್ನುವು ದನ್ನು ಮಾನ್ಯ ಮಂತ್ರಿಗಳು ವಿಚಾರಿಸಬೇಕು ಎಂದು ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ದೊಡ್ಡ ದೊಡ್ಡ ಬಂಡವಾಳ ಶಾಹಿಗಳು ಏನು ಮಾಡುತ್ತಿದ್ದಾರೆ. ಎಂದರೆ ಸಾವಿರಾರು ಟನ್ ಸೌದೆಯನ್ನು ಸ್ಟಾಕ್ ಮಾಡಿಬಿಟ್ಟಿದ್ದಾರೆ. ಇದರಿಂದ ಈಪೊತ್ತಿನ ದಿವಸ ಅದರ ಬೆಲೆಯೆಲ್ಲಾ ಏರಿ ಹೋಗಿ ಹೋಲ್‌ಸೇಲ್‌ನಲ್ಲಿ ಟನ್ ಒಂದಕ್ಕೆ ೫೦೦ ರೂಪಾಯಿ ಸರ್ವೆಸೌದೆ ಯನ್ನು ಮಾರುತ್ತಿದ್ದಾರೆ. ಅದೇ ರೀತಿ ಕಾಡು ಸೌದೆ ಟನ್ ಒಂದಕ್ಕೆ ೩೫೦ ರೂಪಾಯಿಯಂತೆ ಮಾರು ತ್ತಿದ್ದಾರೆ. ಈಪೊತ್ತು ಬೆಂಗಳೂರಿನಲ್ಲಿ ಬೇಕಾದರೆ ಅಕ್ಕಿ, ರಾಗಿ ಸಿಗುತ್ತದೆ ಸೌದೆ ಸಿಕ್ಕುವುದು ಬಹಳ ಕಷ್ಟ. ಇದಕ್ಕೆ ಕಾರಣ ಈ ಸೌದೆಯನ್ನು ಹೊರಗಡೆ ಸಾಗಾಣಿಕೆ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ. ಈಪೊತ್ತು ಬೆಂಗಳೂರು ನಗರಕ್ಕೆ ಸುಮಾರು ೪೦-೫೦ ಸಾವಿರ ಟನ್ ಅಷ್ಟು ಸೌದೆ ಬೇಕು. ಅಷ್ಟು ಸೌದೆಯನ್ನು ಆಕ್ಯುಮುಲೇಟ್ ಮಾಡಿಕೊಳ್ಳದೇ ಹೋದರೆ ನಾವು ಮುಂದೆ ಬಹಳ ಕಷ್ಟಪಡ ಬೇಕಾಗುತ್ತದೆ. ಮತ್ತು ನಾನು ಮೊದಲೇ ಹೇಳಿದ ಹಾಗೆ ಈ ಬಗ್ಗೆ ಮಾಫಿ ಪಾಸ್ ಕೊಡುವಾಗ ತೀವ್ರ ವಾಗಿ ಎಚ್ಚರಿಕೆ ವಹಿಸಿ ಸರಿಯಾಗಿ ವಿಚಾರಿಸಿ ಕೊಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಉದಾಹರಣೆಗೆ ನಮ್ಮ ಕೋಲಾರ ಡಿವಿಷನ್‌ನಲ್ಲಿ ಏನಾಗಿದೆ ಎಂದರೆ ಈ ಮಾಫಿ ಪಾಸ್ ಕೊಡುವಾಗ ಸರ್ಕಾರೀ ಪ್ಲಾಂಟೇಷನ್‌ನಲ್ಲಿ ಆದರೆ ಒಂದು ಎಕರೆಗೆ ೨೦ ಟನ್ ಯೀಲ್ಡ್ ತೋರಿಸುತ್ತಾರೆ. ಅದೇ ಪ್ರೈವೇಟ್ ಸೆಕ್ಟಾರ್‌ನಲ್ಲಿ ಈ ಸಾಗಾಣಿಕೆ ಮಾಡುವುದನ್ನು ನೋಡುವುದಾದರೆ ಅವರು ೫೦-೬೦ ಟನ್ ಸಾಗಾಣಿಕೆ ಮಾಡುತ್ತಾರೆ. ಆದುದರಿಂದ ಇದನ್ನು ತಾವು ವೆರಿಫೈ ಮಾಡಬೇಕು ಎಂದು ಹೇಳುತ್ತೇನೆ. ಇವರಿಗೆ ಪರ್ಮಿಟ್ಸ್ ಅನ್ನು ಹೆಚ್ಚಿಗೆ ಕೊಡುವುದರಿಂದ ನಮ್ಮ ಪ್ಲಾಂಟೇಷನ್‌ನಲ್ಲಿರುವ ಅಮೂಲ್ಯವಾದ ಮರಗಳು ಕಳ್ಳಸಾಗಾಣಿಕೆಯಾಗುತ್ತಾ ಇದೆ ಅದನ್ನು ತಾವು ತನಿಖೆ ಮಾಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದಾದರೆ ನಮ್ಮ ತುಮಕೂರು ಜಿಲ್ಲೆಗೆ ಒಂದು ಮಿನಿ ಜೂ ಕೊಡ ಬೇಕೆಂದು ಕೇಳುತ್ತೇನೆ, ಹಾಗೆಯೇ ದೇವರಾಯನ ದುರ್ಗಕ್ಕೊಂದು ಡೀರ್‌ಪಾರ್ಕ್ ಮಾಡಿಕೊಡಬೇಕು ಎಂದು ಕೇಳುತ್ತೇನೆ. ನಮ್ಮ ಜಿಲ್ಲೆಗೆ ಹೆಚ್ಚಿನ ಒಂದು ಪ್ರಾಧಾನ್ಯತೆ ಕೊಟ್ಟು ರೈತರಿಗೆ ಅನುಕೂಲವಾಗುವ ಹಾಗೆ ಹೆಚ್ಚು ಹೆಚ್ಚು ಸೀಡ್ಲಿಂಗ್ಸ್‌ಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದೇನೆಂದರೆ ಈ ಇಲಾಖೆಯಲ್ಲಿ ಸಿನೇ ದರ್ಜೆ ನೌಕರರು ಏನು ಇದ್ದಾರೆ ವಾಚರ್ಸ್ ಮತ್ತು ಗಾರ್ಡ್ ಏನು ಇದ್ದಾರೆ ಅವರನ್ನು ಇನ್ನೂ ರೆಗ್ಯುಲರೈಸ್ ಮಾಡಿಲ್ಲಾ, ಅವರನ್ನು ಪರ್ಮನೆಂಟ್ ಮಾಡಿಕೊಡಬೇಕು ಎಂದು ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಷೇರ್‌ಖಾನ್.—ಸ್ವಾಮಿ, ಗುಲ್ಬರ್ಗಾ ಮತ್ತು ಬೀದರ್ ಡಿಸ್ಟ್ರಿಕ್ಟ್‌ನವರಿಗೆ ಈ ಬಗ್ಗೆ ಮಾತನಾಡುವುದಕ್ಕೆ ತಾವು ಛಾನ್ಸ್ ಕೊಟ್ಟಿಲ್ಲ. ದಯವಿಟ್ಟು ೨ ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನಾವು ಈ ಸದನದಲ್ಲಿ ಎಷ್ಟು ಹೊತ್ತಿನವರೆಗೆ ಕೂರೋಣ ಸ್ವಾಮಿ.

MR. DEPUTY SPEAKER.—We shall sit till the Minister completes his reply.

SRI K. BHASKAR NAIDU.—There is a record built by Sri Sadyojatha. He has finished his reply within seven minutes. Now the Minister for Forest and Mines will complete within five minutes.

MR. DEPUTY SPEAKER.—There is no restriction. You can take your own time to reply. Please start your reply.

ಶ್ರೀ ಜಿ. ಮಾದೇಗೌಡ.—ಸ್ವಾಮಿ, ಅರ್ಧ ಗಂಟೆಯಲ್ಲಿ ನಾನು ಮುಗಿಸುತ್ತೇನೆ.

ಶ್ರೀ ಷೇರ್‌ಖಾನ್.—ಸ್ವಾಮಿ, ಗುಲ್ಬರ್ಗಾ ವಿಷಯದ ಬಗ್ಗೆ ನನಗೆ ಮಾತನಾಡುವುದಕ್ಕೆ ಒಂದೆರಡು ನಿಮಿಷ ಕೊಟ್ಟರೆ ಸಾಕು.

MR. DEPUTY SPEAKER.—No. You can start your reply.

†ಶ್ರೀ ಜಿ. ಮಾದೇಗೌಡ (ಅರಣ್ಯ ಹಾಗೂ ಖನಿಜ ಖಾತೆಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ನಿನ್ನೆಯಿಂದ ನನ್ನ ಖಾತೆಗೆ ಸೇರಿದಂಥಾ ಗಣಿ ಹಾಗೂ ಭೂ ವಿಜ್ಞಾನದ ಮೇಲೆ ಸುಮಾರು ಈ ಮನೆಯ ೧೦–೧೧ ಮಂದಿ ಸದಸ್ಯರು ಮಾತನಾಡಿದ್ದಾರೆ ಹಾಗೂ ಅವರು ಈ ಬಗ್ಗೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಒಂದು ಅರಣ್ಯದ ವಿಷಯವನ್ನು ಮೊಟ್ಟಮೊದಲಾಗಿ ಪ್ರಸ್ತಾಪ ಮಾಡಿದವರು ಶ್ರೀ ಶೀರನಾಳಿ ಚಂದ್ರಶೇಖರ್‌ರವರು. ಏನೆಂದರೆ ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ಹಿಂದೆ ಹೇಗಿತ್ತು, ಈಗ ಹೇಗಿದೆ ಎನ್ನತಕ್ಕಂಥಾ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಅದರಲ್ಲೂ ಕೂಡ ಮಲೆನಾಡಿನಲ್ಲಿ ಈ ಅರಣ್ಯ ಬಹಳ ಅಮೂಲ್ಯವಾಗಿತ್ತು ಹಾಗೂ ಒಂದು ದಟ್ಟವಾದ ಕಾಡಾಗಿತ್ತು, ಆ ಕಾಡಿನಲ್ಲಿ ಕಾಡು ಪ್ರಾಣಿಗಳು ಮೃಗಗಳು ಬೇಕಾದಷ್ಟು ಇದ್ದವು, ಇತ್ತೀಚೆಗಂತೂ ಅವೆಲ್ಲಾ ನಶಿಸಿ ಹೋಗುತ್ತಾ ಇದೆ ಅನ್ನತಕ್ಕಂಥಾ ಮಾತನ್ನು ಅವರು ಬಹಳ ಕಳಕಳಿಯಿಂದ ವ್ಯಕ್ತಪಡಿಸಿದ್ದಾರೆ. ಮಾನ್ಯ ಉಪಾಧ್ಯಕ್ಷರೇ ಈ ಸಂದರ್ಭದಲ್ಲಿ ನಾನು ಮಲೆನಾಡಿನ ವಿಷಯದ ಬಗ್ಗೆ ಪ್ರಸ್ತಾಪ ಮಾಡದೇ, ಮೈದಾನದಿಂದ ಬಂದಿರತಕ್ಕಂಥಾ ನಾನು ಈ ಬಗ್ಗೆ ಕಾಲವನ್ನು ವಿಳಂಬ ಮಾಡದೇ ಬಹಳ ಸೂಕ್ಷ್ಮವಾಗಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಸ್ವಾಮಿ, ಒಂದಾನೊಂದು ಕಾಲದಲ್ಲಿ ನಮ್ಮ ರಾಜ್ಯ ಒಂದು ದೊಡ್ಡ ಅರಣ್ಯವಾಗಿತ್ತು ಎನ್ನತಕ್ಕಂಥಾದ್ದನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರಣ ಒಂದಾನೊಂದು ಕಾಲದಲ್ಲಿ ಈ ದೇಶದಲ್ಲಿ ಸಂಮೃದ್ಧಿ ಮಳೆಯಾಗುತ್ತಿತ್ತು. ಇದು ಎಲ್ಲರಿಗೂ ಗೊತ್ತು. ನಾನು ಹಿಂದಿನ ರಾಮಾಯಣ ಕಾಲದ ಮಾತನ್ನೇ ಹೇಳುತ್ತಿದ್ದೇನೆ, ವಿಜಯನಗರ ಸಾಮ್ರಾಜ್ಯ ಕಾಲದ ಮಾತನ್ನೇ ನಾನು ಈಗ ಹೇಳುತ್ತಿರುವುದು. ನಾನು ಕಳೆದ ೩೦ ವರ್ಷದ ಮಾತನ್ನು ಹೇಳುತ್ತಿದ್ದೇನೆ. ನಾನು ಹುಡುಗನಾಗಿದ್ದಾಗ ನಾವು ದನಕರುಗಳನ್ನು ಮೇಯಿಸುವುದಕ್ಕೆ ಹೊಡೆದು ಕೊಂಡು ಹೋಗತಕ್ಕಂಥಾ ಕಾಲದಲ್ಲಿ ನನಗೆ ಜ್ಞಾಪಕ ಇರುವ ಹಾಗಿ ಈ ಮಳೆ ೧೦—೧೫ ದಿವಸಗಳ ಕಾಲ ಒಂದೇ ಸಮನೆ ಹುಯ್ಯುತ್ತಿತ್ತು. ರೈತರೂ ಹೊರಗಡೆ ಹೋಗುವುದಕ್ಕಾಗುತ್ತಿರಲಿಲ್ಲ ಮನೆಯಲ್ಲಿರುವ ದನಕರಗಳನ್ನೂ ಕೂಡ ಹೊರಗಡೆ ಬಿಡುವುದಕ್ಕಾಗುತ್ತಿರಲಿಲ್ಲ. ನಾನು ಕಣ್ಣಾರೆ ನೋಡಿದ್ದನ್ನು ಹೇಳುತ್ತಿದ್ದೇನೆ. ಈ ಮಾತೇನೂ ಚರಿತ್ರೆಯಲ್ಲಿ ನೋಡಿ ಹೇಳತಕ್ಕಂಥಾ ಮಾತಲ್ಲ, ಪುರಾಣವನ್ನು ಕೇಳಿ ಹೇಳತಕ್ಕಂಥಾ ಮಾತಲ್ಲ ಕಣ್ಣಾರೆ ನೋಡಿದ್ದು. ವಾರಗಟ್ಟಲೆ ದನಕರುಗಳನ್ನು ಹೊರಗಡೆ ಬಿಡದೆ ಜನಗಳೂ ಕೂಡ ಹೊರಗಡೆ ಹೋಗದೆ ಇರತಕ್ಕಂಥಾ ಪರಿಸ್ಥಿತಿ ಹಿಂದಿನ ಕಾಲದಲ್ಲಿ ಇತ್ತು. ಆ ಕಾಲದಲ್ಲಿ ಮಳೆಯೂ ಕೂಡ ಸಕಾಲದಲ್ಲಿ ಚೆನ್ನಾಗಿ ಬರುತ್ತಿತ್ತು ಬೆಳೆಯೂ ಕೂಡ ಚೆನ್ನಾಗಿ ಆಗುತ್ತಿತ್ತು, ಪ್ರಾಣಿಗಳೂ ಚೆನ್ನಾಗಿ ಇರುತ್ತಿದ್ದುವು, ದನಕರುಗಳಿಗೂ ಕೂಡ ಮೇವು ವಗೈರೆ ಚೆನ್ನಾಗಿ ಸಿಗುತ್ತಿತ್ತು, ಅಲ್ಲದೆ ಯಥೇಚ್ಛವಾಗಿ ಹಾಲು ಮೊಸರೂ ಸಿಕ್ಕುತ್ತಿದ್ದವು, ಅದರಿಂದ ಆವಾಗ ಎಲ್ಲ ಜನರೂ ಕೂಡ ಚೆನ್ನಾಗಿ ಇದ್ದರು. ಆವಾಗ ಯಾವುದನ್ನೇ ಆಗಲಿ ನೋಡುವುದಕ್ಕೇನೇ ಬಹಳ ಆನಂದವಾಗುತ್ತಿತ್ತು. ಹಾಗೆಯೇ ದನಕರುಗಳನ್ನೂ ಸಹ ನೋಡುವುದಕ್ಕೆ ಆನಂದವಾಗುತ್ತಿತ್ತು. ಆವಾಗ ಇಂಥಾ ಒಂದು ಕಾಲ ಇತ್ತು ಎಂದು ಈವೊತ್ತು ಅದನ್ನು ಹೇಳುವುದಕ್ಕೇನೇ ಬಹಳ ಶೋಚನೀಯವಾಗಿದೆ. ಏತಕ್ಕೆಂದರೆ ಈವೊತ್ತಿನ ಸ್ಥಿತಿ ಬಹಳ ಶೋಚನೀಯ ಸ್ಥಿತಿಯಾಗಿದೆ. ಕಾರಣ ಈವೊತ್ತಿನ ಸ್ಥಿತಿಯಲ್ಲಿ ಜನಗಳನ್ನೂ ನೋಡುವುದಕ್ಕಾಗುವುದಿಲ್ಲ, ಪ್ರಾಣಿಗಳನ್ನೂ ನೋಡುವುದಕ್ಕಾಗುವುದಿಲ್ಲ. ಈವೊತ್ತು ಮಾನ್ಯ ಸದಸ್ಯರನೇಕರು ಕಾಡಿನಲ್ಲಿರತಕ್ಕಂಥಾ ಪ್ರಾಣಿಗಳು ನಮ್ಮ ಹಳ್ಳಿಗೆ ಬಂದು ನಮ್ಮನ್ನು ತಿನ್ನಲಿಕ್ಕೆ ಜನರನ್ನು ತಿನ್ನಲಿಕ್ಕೆ

ಇಲ್ಲಿರುವ ಪ್ರಾಣಿಗಳನ್ನು ತಿನ್ನಲಿಕ್ಕೆ ಹಾಗೂ ಇಲ್ಲಿರುವ ದನಕರಗಳನ್ನು ತಿನ್ನಲಿಕ್ಕೆ ಬಂದಿವೆ ಅನ್ನುವ ಮಾತನ್ನು ಹೇಳಿದರು. ಇದಕ್ಕೆ ಕಾರಣ ಏನು ಎಂದರೆ ಈವೊತ್ತು ಪ್ರಾಣಿಗಳಿಗೂ ಕೂಡ ಆ ಕಾಡಿನಲ್ಲಿ ಯಾವ ಆಹಾರವೂ ಸಿಗದೇ ಇರತಕ್ಕಂಥಾ ಸ್ಥಿತಿಯಲ್ಲಿವೆ. ನಾವೂ ಹಾಗೆಯೇ ಇದ್ದೇವೆ. ಈವೊತ್ತಿನ ದಿವಸ ಆಹಾರವನ್ನು ತಿನ್ನಲಿಕ್ಕೆ ಪ್ರಾಣಿಗಳಿಗೂ ಇಲ್ಲಾ, ಜನಗಳಿಗೂ ಕೂಡ ಬಹಳ ತೊಂದರೆ ಇದೆ. ಮಾನ್ಯ ಉಪಾಧ್ಯಕ್ಷರೇ, ಈ ಸಂದರ್ಭದಲ್ಲಿ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಅದನ್ನು ತಮ್ಮ ಮುಂದೆ ಹೇಳಬಯಸುತ್ತೇನೆ.

೧ ಪಿ.ಎಂ.

ನಾವು ಹಿಂದೆ ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡುವಾಗ, ಒಂದು ಮನೆಯಲ್ಲಿ ಬೆಣ್ಣೆಯನ್ನು ಏನಾದರೂ ಕಾಯಿಸಿದರೆ ಅಕ್ಕಪಕ್ಕದ ನೂರಾರು ಮನೆಗಳಿಗೆ ಅದರ ವಾಸನೆ ಹೋಗುತ್ತಿತ್ತು. ಒಳ್ಳೆಯ ಸಾಂಬಾರು ಪದಾರ್ಥಗಳನ್ನು ಉಪಯೋಗಿಸಿಕೊಂಡು ನಮಗೆ ಬೇಕಾದಂಥ, ತಿಂಡಿ ತಿನಿಸುಗಳನ್ನು ಮಾಡಿದರೆ ಅದರ ವಾಸನೆ ಹತ್ತಾರು ಮನೆಗಳಿಗೆ ಗೊತ್ತಾಗಿ, ಎಷ್ಟು ಚೆನ್ನಾಗಿ ಮಾಡುತ್ತಾರೆ ಎನ್ನತಕ್ಕಂಥ ಪರಿಸ್ಥಿತಿ ಇತ್ತು. ಈಗ ಏನಾಗಿದೆ ಎಂದರೆ ಬೆಣ್ಣೆ ಕಾಯಿಸಿದರೆ ಅದರ ತುಪ್ಪದ ವಾಸನೆ ಮೊದಲಾಗಿ ನಮಗೇ ಗೊತ್ತಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಇವತ್ತು ಕಾಲಕ್ಕೆ ಸರಿಯಾಗಿ ಮಳೆ ಇಲ್ಲ, ಬೆಳೆ ಇಲ್ಲ. ಬೆಳೆ ಇಲ್ಲದೇ ಇರುವುದರಿಂದ ದನಕರುಗಳಿಗೆ ಒಳ್ಳೆಯ ಮೇವು ಸಿಕ್ಕುವುದಿಲ್ಲ. ಮೇವು ಇಲ್ಲದೇ ಇರುವುದರಿಂದ ಅವು ಸರಿಯಾಗಿ ಹಾಲನ್ನು ಕೊಡುವುದಿಲ್ಲ. ಅವು ಕೊಡತಕ್ಕಂಥ ಸ್ವಲ್ಪ ಸ್ವಲ್ಪ ಹಾಲಿನಿಂದ ಒಳ್ಳೆಯ ಮೊಸರು, ಬೆಣ್ಣೆ ಆಗುವುದಿಲ್ಲ. ಆ ಬೆಣ್ಣೆಯನ್ನು ಕಾಯಿಸಿದರೆ ತುಪ್ಪದ ವಾಸನೆಯೂ ಬರುವುದಿಲ್ಲ. ಈ ದೃಷ್ಟಿಯಲ್ಲಿ ನಾನು ಈ ಅರಣ್ಯವನ್ನು ಬೆಳೆಸಬೇಕು ಉಳಿಸಬೇಕು ಎಂದು ಹೇಳತಕ್ಕಂಥಾದ್ದು. ಇದು ಇಡೀ ಈ ಒಂದು ದೇಶದ ಮಾತಲ್ಲ; ಇಡೀ ರಾಷ್ಟ್ರದಲ್ಲಿಯೇ ಇದೊಂದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಇವತ್ತು ಇಡೀ ರಾಷ್ಟ್ರದಲ್ಲಿ ವಾತಾವರಣ ಕೆಟ್ಟಿದೆ. ಇವತ್ತು ಅಟ್ಮಾಸ್ಫಿಯರ್ ಪೊಲ್ಯೂಷನ್ ಎಂದು ನಾವೇನು ಹೇಳುತ್ತೇವೆ, ಅದು ಹಳ್ಳಿಗಳಲ್ಲೇ ಆಗಲೀ, ಪಟ್ಟಣದಲ್ಲೇ ಆಗಲಿ ಪರಿಸರ ಕೆಟ್ಟು ಹೋಗಿದೆ. ಇವತ್ತು ಇದೊಂದು ಪ್ರಬುದ್ಧ ಸಮಸ್ಯೆಯಾಗಿ ಪರಿಣಮಿಸಿದೆ. ಈ ಒಂದು ವಾತಾವರಣವನ್ನು ಶುದ್ಧಗೊಳಿಸುವುದಕ್ಕಾಗಿ ನಾವು ಹೆಚ್ಚಿನ ರೀತಿಯಲ್ಲಿ ಕಾಡನ್ನು ಬೆಳೆಸಬೇಕು. ಇವತ್ತಿನ ದಿವಸ ನಮಗೆ ಒಳ್ಳೆಯ ಗಾಳಿ ಬೇಕು. ನಾನು ಆಗಲೇ ಒಂದು ಮಾತನ್ನು ಹೇಳುವುದನ್ನು ಮರೆತೆ. ಹಿಂದೆ ಕಾಡು ಇತ್ತು, ಒಳ್ಳೆಯ ಗಾಳಿ ಇತ್ತು, ಜನಾರೋಗ್ಯ ಚೆನ್ನಾಗಿ ಇತ್ತು. ಅವತ್ತು ಆಸ್ಪತ್ರೆಗಳ ಸಂಖ್ಯೆ, ಡಾಕ್ಟರುಗಳ ಸಂಖ್ಯೆ ಕಡಿಮೆ ಇತ್ತು. ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಎಲ್ಲೆಲ್ಲೂ ಲೆಕ್ಕವಿಲ್ಲದಷ್ಟು ಆಸ್ಪತ್ರೆಗಳು, ಡಾಕ್ಟರುಗಳು, ಇದ್ದಾರೆ. ಎಲ್ಲೆಲ್ಲೂ ರೋಗ ರುಜಿನಗಳು ಹೆಚ್ಚಾಗಿದೆ. ಇದಕ್ಕೆಲ್ಲಾ ಕಾರಣ ಕಾಡನ್ನು ಕಡಿದು ಹಾಳು ಮಾಡಿದ್ದು. ಈ ಒಂದು ಹಿನ್ನಲೆಯಲ್ಲಿ ಈ ಮನೆಯ ೧೦–೧೨ ಜನ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಆಧಾರದ ಮೇಲೆ ನಾವು ಇವತ್ತು ಕಾಡನ್ನು ಉಳಿಸಬೇಕು ಮತ್ತು ಬೆಳೆಸಬೇಕು. ಇವತ್ತು ಈ ದೇಶದಲ್ಲಿ ಆಲ್ ಇಂಡಿಯಾ ಆವರೇಜ್ ಪ್ರಕಾರ ೨೩ ಪರ್ಸೆಂಟ್‌ನಷ್ಟು ಕಾಡು ಇರಬೇಕಾಗಿತ್ತು. ಇದು ಹಿಂದೆ ೧೯ ಪರ್ಸೆಂಟ್‌ನಷ್ಟು ಇತ್ತು, ಇವತ್ತು ೧೫ ಪರ್ಸೆಂಟ್‌ನಷ್ಟು ಕಾಡು ನಮ್ಮಲ್ಲಿ ಇದೆ. ಈ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಇವತ್ತು ನಾವು ದೊಡ್ಡ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನು ಮಾಡಿದ್ದೇವೆ, ಎಲೆಕ್ಟ್ರಿಕಲ್-ಪ್ರಾಜೆಕ್ಟ್‌ಗಳನ್ನು ಮಾಡಿದ್ದೇವೆ, ರಸ್ತೆಗಳನ್ನು ಮಾಡಿದ್ದೇವೆ. ಹೀಗಾಗಿ ನಾವು ನಮ್ಮ ರಾಜ್ಯದಲ್ಲಿ ಇದ್ದಂತಹ ಉತ್ಕೃಷ್ಟವಾದ ಕಾಡುಗಳನ್ನು ಅದರಲ್ಲೂ ಮಲೆನಾಡು ಭಾಗದಲ್ಲಿ ಇದ್ದಂತಹ ಉತ್ಕೃಷ್ಟವಾದ ಕಾಡನ್ನು ಕಳೆದುಕೊಂಡಿದ್ದೇವೆ. ಇವತ್ತು ೨½ ಲಕ್ಷ ಎಕರೆಯಷ್ಟು ಉತ್ಕೃಷ್ಟವಾದ ಕಾಡನ್ನು ಕಳೆದುಕೊಂಡಿದ್ದೇವೆ. ನಾವು ನಮ್ಮ ಹಳ್ಳಿಯ ಜನಗಳಿಗೆ ಕೆರೆಗಳನ್ನು ಕಟ್ಟಿಸಿಕೊಡಬೇಕು, ಎಲೆಕ್ಟ್ರಿಸಿಟಿ ಕೊಡಬೇಕು, ರಸ್ತೆಗಳನ್ನು ಮಾಡಿ ಕೊಡಬೇಕು ಹೀಗೆ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳಿಗಾಗಿ ನಾವು ಕಾಡನ್ನು ವಿಧಿಯಿಲ್ಲದೇ ಆಹುತಿ ಕೊಡಬೇಕಾಗಿರತಕ್ಕಂಥ ಪ್ರಸಂಗ ಬಂದಿದೆ. ಈ ಅಭಿವೃದ್ಧಿ ಕಾರ್ಯಗಳಿಗಾಗಿ ನಮ್ಮ ರಾಜ್ಯದಲ್ಲಿ ೨½ ಲಕ್ಷ ಎಕರೆಯಷ್ಟು ಕಾಡು ಇವತ್ತು ನಮ್ಮ ಕೈಬಿಟ್ಟು ಹೋಗಿದೆ. ಈ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರದವರು ಈ ಬಗ್ಗೆ ಬಹಳ ಧೀರ್ಘವಾಗಿ ಯೋಚನೆ ಮಾಡಿ ಇವತ್ತು ೧೯ ಪರ್ಸೆಂಟ್‌ನಷ್ಟು ಕಾಡನ್ನಾದರೂ ನಾವು ಉಳಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ರವಿನ್ಯೂ ಇಲಾಖೆಯ ಅಧಿಕಾರದಲ್ಲಿ ಬರತಕ್ಕಂಥ ಸಿ. ಅಂಡ್ ಡಿ ಜಮೀನನ್ನು ಅವರಿಂದ ತೆಗೆದುಕೊಂಡು

ಸುಮಾರು ೧೫ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನಾವು ಅರಣ್ಯವನ್ನು ಬೆಳೆಸಿದ್ದೇವೆ. ಇವತ್ತು ಒಟ್ಟು ೨೨ ಸಾವಿರ ಎಕರೆಗಳಷ್ಟು ಸಿ. ಅಂಡ್ ಡಿ ಲ್ಯಾಂಡ್ಸ್ ಇದೆಯೆಂದು ಅಂಕಿಅಂಶಗಳಿಂದ ಗೊತ್ತಾಗಿದೆ. ಮತ್ತೆ ಈಗಾಗಲೇ ಅರಣ್ಯ ಇಲಾಖೆಗೆ ೭೦೦೦ ಎಕರೆಯಷ್ಟು ಜಮೀನು ಬಂದಿದೆ. ಈ ೭ ಸಾವಿರ ಎಕರೆ ಪ್ರದೇಶದಲ್ಲಿ ಈಗಾಗಲೇ ನಾವು ಮರಗಿಡಗಳನ್ನು ಬೆಳೆಸಿದ್ದೇವೆ. ಹಿಂದೆ ಈ ಕಾಡಿನ ಪರ್ಸೆಂಟೇಜ್ ಏನಿತ್ತು ೧೯ ಪರ್ಸೆಂಟ್, ಅದು ನಮಗೆ ಬರುತ್ತಿದೆ. ಈ ದೃಷ್ಟಿಯಿಂದ ಸುಮಾರು ೨೦ ಸಾವಿರ ಅಥವಾ ೧೮ ಸಾವಿರ ಅಥವಾ ೧೯ ಸಾವಿರ ಎಕರೆಯಷ್ಟು ಜಮೀನಿನಲ್ಲಿ ಇದು ಬರುತ್ತಿದೆ. ಇದಕ್ಕೆ ೧೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ ಈಗಾಗಲೇ ನಾವು ಪ್ರತಿವರ್ಷ ಸುಮಾರು ೮-೯ ಕೋಟಿ ರೂಪಾಯಿಗಳ ಹಣವನ್ನು ಈ ಅರಣ್ಯವನ್ನು ಬೆಳೆಸುವುದಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಕಳೆದ ಸಾರಿ ಇದಕ್ಕಾಗಿ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮತ್ತು ಈ ಸೋಷಿಯಲ್ ಫಾರೆಸ್ಟ್ ಸ್ಕೀಮ್‌ಗಾಗಿ ನಾವು ನಮ್ಮ ಸರ್ಕಾರದಿಂದ ಸಾಕಷ್ಟು ಹಣವನ್ನು ಹಾಕಿಕೊಂಡಿರುವುದಲ್ಲದೇ ಕೇಂದ್ರ ಸರ್ಕಾರದಿಂದ ಮತ್ತು ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಿಂದ ಸುಮಾರು ೬೦ ಕೋಟಿ ರೂಪಾಯಿ ಗಳನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಮುಂದಿನ ೧೦ ವರ್ಷದ ಅವಧಿಯಲ್ಲಿ ಈ ಸಿ. ಅಂಡ್ ಡಿ ಲ್ಯಾಂಡ್ಸ್ ಏನಿದೆ ಅದರಲ್ಲಿ ಅಂದರೆ ಸುಮಾರು ೧೮ ಲಕ್ಷ ಎಕರೆಯಷ್ಟು ಜಮೀನಿನಲ್ಲಿ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅರಣ್ಯವನ್ನು ಬೆಳೆಸಬೇಕು ೧೮ ಪರ್ಸೆಂಟ್ ಕಾಡನ್ನು ಬೆಳೆಸಬೇಕು ಎನ್ನತಕ್ಕಂಥ ಗುರಿ ಏನಿದೆ ಅದನ್ನು ಮುಟ್ಟಬೇಕು ಎನ್ನತಕ್ಕಂಥ ಒಂದು ಉನ್ನತ ಗುರಿಯನ್ನು ಇಟ್ಟು ಕೊಂಡಿದ್ದೇವೆ. ಆ ಅವಧಿಯಲ್ಲಿ ೧೮ ಪರ್ಸೆಂಟ್‌ನಷ್ಟು ರೀಚ್ ಆದರೂ ಕೂಡ ನ್ಯಾಷನಲ್ ಆವರೇಜ್ ಏನಿದೆ ೨೩ ಪರ್ಸೆಂಟ್‌ನಷ್ಟು ಕಾಡು ಬೆಳೆಸತಕ್ಕಂಥಾದ್ದು ಅದನ್ನೂ ಕೂಡ ಮುಟ್ಟಬೇಕು ಎನ್ನತಕ್ಕಂಥ ಗುರಿ ಇದೆ; ಈ ಬಗ್ಗೆ ಅನೇಕ ಕಾರ್ಯಕ್ರಮಗಳು ನಮ್ಮ ಮುಂದಿವೆ. ಈಗ ನಮ್ಮಲ್ಲಿ ಸರಾಸರಿ ೧೯ ಪರ್ಸೆಂಟ್‌ನಷ್ಟು ಅರಣ್ಯ ಪ್ರದೇಶ ಇದೆ. ಇಡೀ ಇಂಡಿಯಾ ದೇಶದಲ್ಲೇ ಇತರ ರಾಜ್ಯಗಳಲ್ಲಿ ಇದು ಎಷ್ಟು ಪರ್ಸೆಂಟ್ ಇದೆ ಎಂಬುದನ್ನು ನೋಡುವುದಾದರೆ, ಆಂಧ್ರಪ್ರದೇಶವಲ್ಲಿ ೨೩ ಪರ್ಸೆಂಟ್, ಅಸ್ಸಾಂ ೩೬ ಪರ್ಸೆಂಟ್ ಬಿಹಾರದಲ್ಲಿ ೧೭ ಪರ್ಸೆಂಟ್, ಹಿಮಾಚಲ ಪ್ರದೇಶದಲ್ಲಿ ೩೭ ಪರ್ಸೆಂಟ್, ಕೇರಳದಲ್ಲಿ ೨೯ ಪರ್ಸೆಂಟ್, ಮಧ್ಯಪ್ರದೇಶದಲ್ಲಿ ೩೮ ಪರ್ಸೆಂಟ್, ಮಹಾರಾಷ್ಟ್ರದಲ್ಲಿ ೨೧ ಪರ್ಸೆಂಟ್, ಮಣಿಪುರದಲ್ಲಿ ೧೮ ಪರ್ಸೆಂಟ್, ಒರಿಸ್ಸಾ ೪೩ ಪರ್ಸೆಂಟ್, ಪಂಜಾಬ್ ೪ ಪರ್ಸೆಂಟ್, ರಾಜಾಸ್ಥಾನ್ ೧೧ ಪರ್ಸೆಂಟ್, ತಮಿಳುನಾಡಿನಲ್ಲಿ ೧೮ ಪರ್ಸೆಂಟ್, ಉತ್ತರಪ್ರದೇಶದಲ್ಲಿ ೧೬ ಪರ್ಸೆಂಟ್, ವೆಸ್ಟ್‌ಬೆಂಗಾಲ್‌ನಲ್ಲಿ ೧೩ ಪರ್ಸೆಂಟ್‌ನಷ್ಟು ಇದೆ. ಈ ನ್ಯಾಷನಲ್ ಆವರೇಜನ್ನು ಮೀರಿರತಕ್ಕಂಥ ರಾಜ್ಯಗಳು ಎಂದರೆ ಅಸ್ಸಾಂ ಮತ್ತು ಹಿಮಾಚಲ ಪ್ರದೇಶ, ಕೇರಳ, ಮಧ್ಯಪ್ರದೇಶ ಮತ್ತು ಒರಿಸ್ಸಾ; ಈ ನಾಲ್ಕೈದು ರಾಜ್ಯಗಳಲ್ಲಿ ಅಷ್ಟು ಪರ್ಸೆಂಟೇಜ್ ಕಾಡು ಇದ್ದರೂ ಕೂಡ ನಮ್ಮಲ್ಲಿ ೧೫ ಪರ್ಸೆಂಟ್ ಕಾಡು ಇದ್ದರೂ ಕೂಡ ನಮ್ಮ ಕಾಡು ಕೇರಳದ ಕಾಡಿಗಿಂತ ಉತ್ಕೃಷ್ಟವಾದ ಕಾಡು ಎಂಬುದು ಎಲ್ಲರಿಗೂ ಗೊತ್ತಿದೆ. ಕಾಡಿನಿಂದ ಬರತಕ್ಕಂಥ ಉತ್ಪತ್ತಿ ಮತ್ತು ಬೆಳೆಯತಕ್ಕಂಥ ಮರಗಳ ಆಧಾರದ ಮೇಲೆ ಅವನ್ನು ಅವಲಂಬಿಸಿ ನೋಡಿ ದಾಗ ಕೇರಳದ ಕಾಡು ಇಡೀ ಇಂಡಿಯಾ ದೇಶದಲ್ಲೇ ಉತ್ಕೃಷ್ಟವಾದ ಕಾಡು ಮತ್ತು ಎರಡನೆಯದು ನಮ್ಮ ಕಾಡು ಉತ್ಕೃಷ್ಟವಾದದ್ದು ಎಂದು ಗೊತ್ತಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಇವತ್ತಿನ ದಿವಸ ನಾವು ಕಾಡನ್ನು ಬೆಳೆಸಬೇಕು ಮತ್ತು ಅದನ್ನು ಉಳಿಸಿಕೊಂಡು ಹೋಗಬೇಕು, ಈ ದಿಕ್ಕಿನಲ್ಲಿ ಹೆಚ್ಚು ಹೆಚ್ಚಾಗಿ ಕಾಡನ್ನು ಬೆಳೆಸತಕ್ಕಂಥ ಕಾರ್ಯಕ್ರಮವನ್ನು ತೀವ್ರವಾಗಿ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಒಟ್ಟಿನಲ್ಲಿ ಒಂದು ಮಾತನ್ನು ಹೇಳುವುದಾದರೆ, ಇವತ್ತು ಅನೇಕ ಮಾನ್ಯ ಸದಸ್ಯರು ಎಲ್ಲಾ ಕಡೆಯೂ ಸೌದೆಯ ಅಭಾವ ಇದೆಯೆಂದೂ, ಬೊಂಬುಗಳಿಗೆ ಅಭಾವ ಇದೆಯೆಂದು, ಕೈಗಾರಿಕೆ ಗಳಿಗೆ ಸೌದೆ ಏನು ಕೊಡುತ್ತಿದ್ದೀರೋ ಅದಕ್ಕೆ ಅಭಾವ ಇದೆ ಎಂದು ಹೇಳಿದ್ದಾರೆ. ಇದೆಲ್ಲಾ ಅಭಾವ ಇಡೀ ದೇಶದಲ್ಲೇ ಇದೆ. ಎಷ್ಟು ಅಭಾವ ಇದೆ ಎನ್ನುವುದನ್ನು ನಾನು ಒಂದೇ ಮಾತಿನಲ್ಲಿ ಹೇಳಿಬಿಡು ತ್ತೇನೆ. ಇದನ್ನು ಹೇಳುವುದಕ್ಕೆ ನಾನು ಹೆಚ್ಚು ಕಾಲ ತೆಗೆದುಕೊಳುವುದಿಲ್ಲ. ಇವತ್ತು ನಮ್ಮಲ್ಲಿ ೫,೩೬,೦೧೬ ಹೆಕ್ಟೇರ್‌ನಷ್ಟು ವಿಸ್ತೀರ್ಣವುಳ್ಳ ಜಮೀನಿನಲ್ಲಿ ಅರಣ್ಯ ಪ್ರದೇಶವಿದೆ. ೩೬ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಬೇಕು ಎಂದು ಒಂದು ಅಂದಾಜನ್ನು ಇಟ್ಟುಕೊಂಡಿದ್ದೇವೆ. ನಮಗೆ ಈಗ ಸೌದೆ ಅಭಾವ ಇದೆ. ನಮ್ಮ ದೇಶದಲ್ಲಿ ವರ್ಷಕ್ಕೆ ದಿನನಿತ್ಯದ ಬಳಕೆಗೆ ೩೨ ಲಕ್ಷ ಟನ್‌ಗಳಷ್ಟು ಸೌದೆ ಬೇಕು ಎಂದು ಒಂದು ಅಂದಾಜು ಇದೆ. ನಮ್ಮಲ್ಲಿ ಇರತಕ್ಕಂಥಾದ್ದು ೧೦ ಲಕ್ಷ ಟನ್ ಸೌದೆ. ಇನ್ನೂ ೨೨ ಲಕ್ಷ ಟನ್‌ಗಳಷ್ಟು ನಮಗೆ ಷಾರ್ಟೇಜ್ ಇದೆ. ಅನೇಕ ಕಾರ್ಖಾನೆಗಳಿಗೂ ಕೂಡ ಸೌದೆಯನ್ನು ಒದಗಿಸ ತಕ್ಕಂಥ ಒಪ್ಪಂದವನ್ನು ನಾವು ಮಾಡಿಕೊಂಡಿದ್ದೇವೆ. ಹೆಂಚಿನ ಕಾರ್ಖಾನೆಗೆ ೬೫ ಸಾವಿರ ಟನ್ ಮತ್ತು

ಹರಿಹರ ಪಾಲಿಫೈಬರ್ ಕಾರ್ಖಾನೆಗೆ ೩೬ ಸಾವಿರ ಟನ್. ಮೈಸೂರಿನ ಒಂದು ಕಾರ್ಖಾನೆಗೆ ಮತ್ತು ವುಡ್ ಇಂಡಸ್ಟ್ರೀಸ್‌ಗೆ ೧೬ ಸಾವಿರ ಟನ್ ಸೌದೆಯನ್ನು ಕೊಟ್ಟಿದ್ದೇವೆ. ಇನ್ನೂ ಅನೇಕ ಕಾರ್ಖಾನೆಗಳ ಜೊತೆಯಲ್ಲಿ ನಾವು ಈ ಬಗ್ಗೆ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ನಾವು ಒಪ್ಪಂದವನ್ನು ಮಾಡಿಕೊಂಡ ಪ್ರಮಾಣದಲ್ಲಿ ಅವರಿಗೆಲ್ಲಾ ಸೌದೆಯನ್ನು ಕೊಡುತ್ತಾ ಇಲ್ಲ ಇದೇ ರೀತಿಯಾಗಿ ಬೊಂಬು. ಬೆತ್ತಗಳನ್ನು ನಾವು ಕೊಡುತ್ತಿದ್ದೇವೆ. ನಮ್ಮ ದೇಶದಲ್ಲಿ ಬಹಳ ಉತ್ಕೃಷ್ಟವಾದ ಬೆತ್ತ ಸಿಕ್ಕುತ್ತಿದೆ. ಈ ವಿಚಾರದಲ್ಲಿ ಬೊಂಬುಗಳನ್ನು, ಬೆತ್ತಗಳನ್ನು ಸಾಕಷ್ಟು ರೀತಿಯಲ್ಲಿ ಕೊಡುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ಈ ವರ್ಷ ಅಂದರೆ ೧೯೮೧–೮೨ ನೇ ಸಾಲಿನಲ್ಲಿ ನಾವು ೧೨,೧೧,೯೯೬ ಬೊಂಬುಗಳನ್ನು ನಾವು ಮಾರಾಟ ಮಾಡಿದ್ದೇವೆ. ಬಿದಿರಿನಿಂದ ಬುಟ್ಟಿ. ಚಾಪೆ ಇತ್ಯಾದಿಗಳನ್ನು ಮಾಡಿಕೊಂಡು ಈ ಕಸುಬನ್ನೇ ಅವಲಂಬಿಸಿಕೊಂಡಿರತಕ್ಕಂಥವರಿಗೂ ಕೂಡ ಸೊಸೈಟಿಗಳನ್ನು ಮಾಡಿ ಅದರ ಮುಖಾಂತರ ಬೊಂಬುಗಳನ್ನು ಕೊಡುತ್ತಿದ್ದೇವೆ. ಇದರಲ್ಲಿ ದುರುಪಯೋಗ ಆಗತಕ್ಕಂಥ ಸಂದರ್ಭಗಳ ಬಗ್ಗೆ ನಾವು ಕೇಳುತ್ತಿದ್ದೇವೆ. ಆದರೂ ಎಲ್ಲೆಲ್ಲಿ ಈ ಕಸುಬನ್ನೇ ಅವಲಂಬಿಸಿಕೊಂಡಿರತಕ್ಕಂಥವರಿಗೆ ಸಾಕಷ್ಟು ಪ್ರಮಾಣದಲ್ಲಿ ಇದು ದೊರಕುತ್ತಾ ಇಲ್ಲ ಎಂಬುದನ್ನು ನಮ್ಮ ಗಮನಕ್ಕೆ ತಂದರೆ ಸೊಸೈಟಿಗಳ ಮುಖಾಂತರ ಇದನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದಲ್ಲದೆ ಬೆತ್ತವನ್ನೇ ಅವಲಂಬಿಸಿಕೊಂಡಿರತಕ್ಕಂಥವರಿಗೆ ನಾವು ೧೦ ಲಕ್ಷ ಬೆತ್ತಗಳನ್ನು ಕೊಡುತ್ತಿದ್ದೇವೆ. ಆಮೇಲೆ ಇನ್ನೊಂದು ಮುಖ್ಯವಾದ ವಿಷಯವೆಂದರೆ ಈ ಗಂಧದ ಮರದ ವಿಷಯ. ತಮಗೆಲ್ಲರಿಗೂ ಗೊತ್ತಿರುವಂತೆ, "ಶ್ರೀಗಂಧದ ನಾಡಿದು, ಚಿನ್ನದ ನಾಡಿದು ಮೈಸೂರು" ಎಂದು ಕವಿಗಳು ಹೇಳಿದ್ದಾರೆ. ಅದೇ ರೀತಿಯಲ್ಲಿ ನಮ್ಮ ನಾಡು ಶ್ರೀಗಂಧದ ನಾಡು. ಸುಮಾರು ೧೧೦೦೦ ಟನ್‌ಗಳಷ್ಟು ಗಂಧದ ಮರಗಳನ್ನು ನಾವು ಮಾರಾಟ ಮಾಡುತ್ತಿದ್ದೇವೆ. ಇದರಿಂದ ೨ ಕೋಟಿ ೭೬ ಲಕ್ಷದಷ್ಟು ಆದಾಯ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರುತ್ತಾ ಇದೆ. ಮೇಲಾಗಿ ಇವತ್ತು ನಾವು ಶ್ರೀಗಂಧದ ಮರಗಳನ್ನು ಸ್ವತಃ ಬೆಳೆಯುತ್ತಾ ಇಲ್ಲ. ಇವು ಕಾಡಿನಲ್ಲಿ ತಾನೇತಾನಾಗಿ ಹುಟ್ಟಿಕೊಳ್ಳುತ್ತಿದ್ದು ಈ ಮರಗಳು ಮೆಚೂರ್ ಸ್ಟೇಜ್‌ಗೆ ಬಂದಾಗ ಅದನ್ನು ಕಡಿಯತಕ್ಕಂಥ ಪದ್ಧತಿಯನ್ನು ನಾವು ಇಟ್ಟುಕೊಂಡಿದ್ದೇವೆ. ಇನ್ನು ಮುಂದೆ ಗಂಧದ ಎಸ್ಟೇಟನ್ನು ಮಾಡಬೇಕೆಂಬ ದೃಷ್ಟಿಯನ್ನು ನಾವು ಇಟ್ಟುಕೊಂಡಿದ್ದೇವೆ ಶಿವಮೊಗ್ಗ, ಧಾರವಾಡ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪೂರ್ತಿಯಾಗಿ ಈ ಶ್ರೀಗಂಧದ ಮರಗಳನ್ನು ಬೆಳೆಸತಕ್ಕಂಥ ಎಸ್ಟೇಟ್‌ಗಳನ್ನು ಮಾಡುವುದಕ್ಕೆ ಈ ವರ್ಷ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದಕ್ಕಾಗಿ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಮಂಜೂರು ಮಾಡಿದ್ದೇವೆ. ಈ ಬಗ್ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಮತ್ತೆ ಅನೇಕ ಮಾನ್ಯ ಸದಸ್ಯರು ಜಮೀನು ಅಕ್ರಮ ಸಾಗುವಳಿ ಬಗ್ಗೆ ಮಾತನಾಡಿದ್ದಾರೆ. ಮತ್ತು ಅಕ್ರಮ ಸಾಗುವಳಿ ಮಾಡಿಕೊಂಡಿರುವ ರೈತರನ್ನು ಖಾಯಂ ಮಾಡಬೇಕೆಂದು ಸಹಾ ಹೇಳಿದ್ದಾರೆ. ಇಡೀ ನಮ್ಮ ರಾಜ್ಯದಲ್ಲಿ ಸುಮಾರು ೪೮ ಸಾವಿರ ಎಕರೆ ಜಮೀನನ್ನು ಅಕ್ರಮ ಸಾಗುವಳಿ ಮಾಡಿಕೊಂಡಿದ್ದಾರೆ. ಈ ಅಕ್ರಮ ಸಾಗುವಳಿ ಮಾಡಿಕೊಂಡಿರುವ ರೈತರ ಬಗ್ಗೆ ಅನುಕಂಪವನ್ನು ತೋರಿಸಿ ಯಾವ ರೈತರಿಗೆ ಯಾವುದೇ ವಿಧವಾದಂತಹ ಜಮೀನು ಇಲ್ಲದೆ ಇರತಕ್ಕಂತಹವರು ಯಾರು ಇದ್ದಾರೆ ಯಾವ ರೈತರಿಗೆ ಜಮೀನು ಕೊಡಬೇಕು ಯಾವ ರೈತರಿಗೆ ಜಮೀನು ಕೊಡಬಾರದು ಯಾರನ್ನು ಖಾಯಂ ಮಾಡಬೇಕು ಎನ್ನತಕ್ಕಂತಹ ವಿಷಯ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಇದರ ಬಗ್ಗೆ ಹಿಂದೆ ಕೇಂದ್ರ ಸರ್ಕಾರದವರು ಒಂದು ಆರ್ಡಿನೆನ್ಸ್‌ನ್ನು ತಂದರು ಆ ನಂತರ ಇದು ಆಕ್ಟ್ ಆಗಿ ಬಂತು. ಈ ಆಕ್ಟ್‌ನಲ್ಲಿ ಏನಿದೆ ಎಂದರೆ ಯಾರು ಕಾಡನ್ನು ಬೆಳೆಸುತ್ತಾರೋ ಅಂಥವರಿಗೆ ಕಾಡನ್ನು ಕೊಡಬೇಕು ಬೇರೆ ಯಾವುದೆ ಉದ್ದೇಶಕ್ಕಾಗಿ ಕಾಡನ್ನು ಕೊಡಬಾರದು ಎನ್ನತಕ್ಕಂತದ್ದು ಆ ಆಕ್ಟ್‌ನಲ್ಲಿ ಇದೆ. ಆದ್ದರಿಂದ ಈ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ಈ ಅಕ್ರಮ ಸಾಗುವಳಿ ಮಾಡಿರುವಂತಹ ರೈತರಿಗೆ ಜಮೀನು ಕೊಡಬೇಕೋ ಬೇಡವೊ ಎನ್ನುವುದನ್ನು ಪರಿಶೀಲನೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದೆ. ಈ ಕಮಿಟಿಯ ವರದಿ ಬಂದ ಕೂಡಲೆ ಸರ್ಕಾರ ರೈತರಿಗೆ ಜಮೀನು ಕೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ.

ಇನ್ನು ಅನೇಕ ಮಾನ್ಯ ಸದಸ್ಯರು ಹರಿಹರ ಪಾಲಿಫೈಬರ್ ಕಂಪನಿಯ ವಿಚಾರವಾಗಿ ಬಹಳ ವಿಫಲವಾಗಿ ಮಾತನಾಡಿದ್ದಾರೆ ನನ್ನ ಸ್ನೇಹಿತರೊಬ್ಬರು ಹೇಳಿದರು, ಇವತ್ತು ಕೈಗಾರಿಕೆಗಳು ಬೆಳೆಯಬೇಕು, ಕೈಗಾರಿಕೆಗಳನ್ನು ಬೆಳೆಸುವುದರಿಂದ ನಮ್ಮ ದೇಶದ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬಹುದು ಎಂದು. ನಮ್ಮ ದೇಶದಲ್ಲಿ ಅನೇಕ ಕೈಗಾರಿಕೆಗಳನ್ನು ಮಾಡುವ ಸಲುವಾಗಿ ಫಾರೆಸ್ಟ್ ಬೇಸಿಸ್ ಇಂಡಸ್ಟ್ರೀಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಕಾನೂನು ಉಲ್ಲಂಘನೆ ಮಾಡಿ ಅವರಿಗೆ ಬೇಕಾದಂತಹ ಸೌಲಭ್ಯ ಮತ್ತು ಅವರಿಗೆ ಬೇಕಾದಂತಹ ಜಾಗ ಮತ್ತು ಅವರಿಗೆ ಬೇಕಾದಂತಹ ರಾ ಮೇಟೀರಿಯಲ್ಸ್ ಕೊಡುವ ಪದ್ಧತಿಯನ್ನು ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದ್ದರಿಂದ ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಹರಿಹರ ಪಾಲಿಫೈಬರ್ ಕಂಫನಿಯವರು ೧೯೭೪ ನೇ ಇಸವಿಯಲ್ಲಿ ಒಂದು ಕರಾರನ್ನು ಮಾಡಿಕೊಂಡಿದ್ದಾರೆ ಇದರಲ್ಲಿ ಏನಿದೆ ಎಂದರೆ ಒಂದು ಟನ್ ಸೌದೆಗೆ ೨೪ ರೂಪಾಯಿಗಳಂತೆ ೧ ಲಕ್ಷ ೫೦ ಸಾವಿರ ಟನ್ ಸೌದೆ ಅನ್ನು ೩೦ ವರ್ಷಗಳವರವಿಗೆ ಸಪ್ಲೈ ಮಾಡಬೇಕೆಂದು ಕರಾರನ್ನು ಮಾಡಿಕೊಂಡಿದ್ದಾರೆ. ಮತ್ತು ೧೯೭೮ ರಲ್ಲಿ ಇನ್ನೊಂದು ಕರಾರು ಮಾಡಿಕೊಂಡಿದ್ದಾರೆ ಅದೇನೆಂದರೆ ೧ ಟನ್‌ಗೆ ೨೪ ರೂಪಾಯಿಗಳಂತೆ ೧ ಲಕ್ಷ ೫೦ ಸಾವಿರ ಟನ್‌ಗಳು ೧೫ ವರ್ಷಗಳವರೆವಿಗೆ ಕೊಡಬೇಕೆಂದು ಒಂದು ಟನ್ ಸೌದೆ ನಂತರ ಮುಂದಿನ ೧೦ ವರ್ಷಗಳಿಂದ ೩೦ ವರ್ಷಗಳವರೆವಿಗೆ ೩೬ ರೂಪಾಯಿಗಳನ್ನು ಕೊಡತಕ್ಕಂತಹ ಕರಾರು ಮಾಡಿಕೊಂಡಿದ್ದಾರೆ. ಎರಡನೆಯದಾಗಿ ಈ ಕಂಪನಿಯವರು ನಮಗೆ ೧½ ಲಕ್ಷ ಟನ್ ಸಾಕಾಗುವುದಿಲ್ಲ ಆದ್ದರಿಂದ ನಮಗೆ ಇನ್ನು ೬೫ ಸಾವಿರ ಟನ್ ಜಾಸ್ತಿ ಕೊಡಬೇಕೆಂದು ಅವರು ಕೇಳಿದ್ದರು. ಆ ಮೇಲೆ ಮತ್ತೆ ೬೫ ಸಾವಿರ ಟನ್ ಕೊಡಬೇಕೇದು ಕರಾರು ಆಗಿದೆ. ಈಗ ನಾವು ಒಟ್ಟು ೨ ಲಕ್ಷ ೧೫ ಸಾವಿರ ಟನ್‌ಗಳು ಅವರಿಗೆ ಕೊಡಬೇಕಾಗಿತ್ತು. ಆದರೆ ನಾವು ಇದುವರೆವಿಗೂ ಅವರಿಗೆ ೯೦ ಸಾವಿರ ಟನ್‌ಗಳು ಕೂಡ ಕೊಡುವುದಕ್ಕೆ ಆಗುತ್ತಿಲ್ಲ. ಮತ್ತು ಇವತ್ತು ಓಪನ್ ಮಾರ್ಕೆಟ್‌ನಲ್ಲಿ ಒಂದು ಟನ್ ಸೌದೆಗೆ ೩೫೦ ರೂಪಾಯಿಗಳು ಮಾರಾಟ ಮಾಡುತ್ತಿದ್ದಾರೆ ಆದ್ದರಿಂದ ನೀವು ಇನ್ನು ಮುಂದೆ ೬೦ ರೂಪಾಯಿಗಳನ್ನು ಕೊಡಬೇಕೆಂದು ಹೇಳಿ ನ್ಯಾಯವಾದ ದೃಷ್ಟಿಯಲ್ಲಿ ಸರ್ಕಾರದ ಬೊಕ್ಕಸಕ್ಕೆ ಹಣ ಬರಬೇಕು ಎನ್ನುವ ದೃಷ್ಟಿಯಲ್ಲಿ ನಾವು ಇವತ್ತು ಒಂದು ಟನ್‌ಗೆ ೬೦ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ನೀವು ಕೊಟ್ಟಿರುವ ರೇಟ್ ತುಂಬ ಕಡಿಮೆ ಆದ್ದರಿಂದ ರೇಟ್ ಸ್ವಲ್ಪ ಜಾಸ್ತಿ ಮಾಡಿ ಎಂದು ಹೇಳಿದ್ದಾರೆ. ಆದ್ದರಿಂದ ಇನ್ನು ಮುಂದೆ ಜಾಸ್ತಿ ರೇಟ್‌ನ್ನು ಅವರಿಂದ ವಸೂಲ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಕುಮಾರಿ ಎಸ್. ಪ್ರಮೀಳ.—ಸಾರ್ವಜನಿಕರಿಗೆ ಒಂದು ಟನ್‌ಗೆ ಎಷ್ಟು ರೂ. ಗಳನ್ನು ವಸೂಲ್ ಮಾಡುತ್ತಿದ್ದಿರೋ ಅಷ್ಟೇ ರೇಟನ್ನು ಅವರಿಂದ ವಸೂಲ್ ಮಾಡುತ್ತೀರಾ?

ಶ್ರೀ ಜಿ. ಮಾದೇಗೌಡ.—ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವ ರೇಟಿಗಿಂತ ಕಡಿಮೆ ರೇಟ್ ಅವರಿಗೆ ಕೊಡುವುದಿಲ್ಲ ಎನ್ನುವ ಭರವಸೆಯನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಕುಮಾರಿ ಎಸ್. ಪ್ರಮೀಳರವರಿಗೆ ಕೊಡಲು ಇಷ್ಟಪಡುತ್ತೇನೆ. ಕುಮಾರಿ ಪ್ರಮೀಳರವರಿಗೆ ಗೊತ್ತು ಇದರ ಮೇಲೆ ರಜ್ಯದ ಹೈಕೋರ್ಟಿನಲ್ಲಿ ಕೇಸು ಇದೆ. ಈ ಕೇಸು ತೀರ್ಮಾನವಾಗಿ ಬಂದ ಮೇಲೆ ನಾವು ತೀರ್ಮಾನ ತೆಗದುಕೊಳ್ಳುತ್ತೇವೆ.

ಇನ್ನು ನಮ್ಮಲ್ಲಿ ಅನೇಕ ಪ್ಲಾಂಟೇಷನ್ ಕಾರ್ಪೊರೇಷನ್‌ಗಳು ಇವೆ, ಈ ಪ್ಲಾಂಟೇಷನ್‌ಗಳಲ್ಲಿ ನಾವು ರಬ್ಬರ್ ಕೊಕೋ ಟೀ ಯನ್ನು ಬೆಳೆಯುತ್ತೇವೆ. ಈ ಪ್ಲಾಂಟೇಷನ್‌ಗಳು ಅರಣ್ಯ ಇಲಾಖೆಗೆ ಬಹಳ ಸಹಾಯಕವಾಗಿವೆ. ಈ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಬಹಳ ಲಾಸಾಗಿವೆ ಎಂದು ಹೇಳಿದರು. ಆದ್ದರಿಂದ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ನಾವು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ. ಕೈಗಾರಿಕೆಗಳನ್ನು ಬೆಳೆಸುವುದುಕೋಸ್ಕರ ಒಂದು ಕ್ರಾಂತಿಕಾರಕವಾದ ಮತ್ತು ಪ್ರಗತಿಪರವಾದ ಕಾರ್ಯಕ್ರಮ ಎಂದು ಹೇಳಿ ನಮ್ಮ ಸರ್ಕಾರ ಇವತ್ತು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇದರಲ್ಲಿ ಕೆಲವು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಈ ಒಂದು ಕಾರ್ಯಕ್ರಮದಲ್ಲಿ ೩-೪ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಒಂದನೆಯದು ರಸ್ತೆಗಳ ಪಕ್ಕದಲ್ಲಿ ಸಾಲು ಮರಗಳನ್ನು ಬೆಳೆಸುವುದು. ಎರಡನೆಯದಾಗಿ ರಸ್ತೆಯ ಪಕ್ಕದಲ್ಲಿ ಯಾವ ರೈತನ ಜಮೀನು ಇರುತ್ತದೆಯೋ ಆ ರೈತನು ಮರವನ್ನು ಬೆಳೆಯತಕ್ಕಂತದ್ದು. ಮತ್ತು ಆ ಮರದಲ್ಲಿ ಬೆಳೆದಂತಹ ಫಸಲು ಆ ರೈತನಿಗೆ

ಸಿಗುವಂತೆ ಮಾಡುವುದು ಈ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಇನ್ನು ಬಹಳ ಮುಖ್ಯ ವಾಗಿ ಕೊಡಗು ಜಿಲ್ಲೆಯಲ್ಲಿ ಜಮ್ಮಾ ಮಲೆ ಅರಣ್ಯದ ಬಗ್ಗೆ ಈ ಮನೆಯಲ್ಲಿ ಮತ್ತು ಆ ಮನೆಯಲ್ಲಿ ಬಹಳ ವಿಫಲವಾದ ಚರ್ಚೆ ನಡೆದಿದೆ. ಮತ್ತು ದೇಶದಲ್ಲಿಯೇ ಇದು ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತ್ತು. ಆದ್ದರಿಂದ ಸರ್ಕಾರ ಇನ್ನು ಮುಂದೆ ಜಮ್ಮಾಮಲೆ ಕಾಡಿನಲ್ಲಿ ಬೆಳೆದಂತಹ ಮರ ಗಳನ್ನು ಸರ್ಕಾರದವರೇ ಕಡಿಯಬೇಕು ಬೇರೆ ಯಾವ ಖಾಸಗಿ ಜನಗಳಿಗೆ ಕೊಡಬಾರದು ಎನ್ನತಕ್ಕಂತಹ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ಮತ್ತು ನಾವು ಮೇಲೆ ಹೇಳಿದ ಕೈಗಾರಿಕೆಗಳಿಗೆ ಸರ್ಕಾರ ದವರು ಬೇಕಾದಷ್ಟು ಮರಗಳನ್ನು ಸಪ್ಲೈ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದ ಆ ಕೈಗಾರಿಕೆ ಗಳನ್ನು ಮುಚ್ಚಿ ಹಾಕುವ ಪರಿಸ್ಥಿತಿ ಬಂದಿದೆ. ಇದನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ಸಿ.ಎನ್.ಡಿ. ಲ್ಯಾಂಡನ್ನು ಕೈಗಾರಿಕೆಯವರಿಗೆ ವರ್ಗಾವಣೆ ಮಾಡಿ ಅವರಿಗೆ ಬೇಕಾದಂತಹ ಮರಗಳನ್ನು ಅವರೇ ಬೆಳೆಸಿಕೊಳ್ಳುವಂತೆ ನಾವು ಏರ್ಪಾಡು ಮಾಡಿದ್ದೇವೆ. ಅವು ಯಾವುವೆಂದರೆ ಮೈಸೂರು ಪೇಪರ್ ಮಿಲ್ಸ್ ಮತ್ತು ದಾಂಡೇಲಿ ಪೇಪರ್ ಮಿಲ್ಸ್ ನವರು ಅವರಿಗೆ ಬೇಕಾದಂತಹ ಮರಗಳನ್ನು. ರಾಮೆಟೀರಿಯಲ್ಸ್ ಅನ್ನು ಅವರೇ ಬೆಳೆಸಿಕೊಂಡು ಅವರೇ ತೆಗೆದುಕೊಂಡು ನಡೆಸಬೇಕು ಎನ್ನುವ ದೃಷ್ಟಿಯಿಂದ ನಾವು ಅವರಿಗೆ ಖಾಲಿ ಜಾಗವನ್ನು ಕೊಟ್ಟರೆ ಅವರೇ ಮರಗಳನ್ನು ಬೆಳೆಸಿಕೊಳ್ಳುತ್ತಾರೆ ಇದರಿಂದ ಕಾಡಿನ ಮೇಲೆ ಕಮಿಟ್‌ಮೆಂಟ್ ಸ್ವಲ್ಪ ಕಡಿಮೆಯಾಗುತ್ತದೆ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

SRI K. BHASKAR NAIDU.—In November or September, you have committed the agreement for about 30 or 25 or 10 years. What made you to commit yourselves like that?

ಶ್ರೀ ಜಿ. ಮಾದೇಗೌಡ.—ನಾವು ಕೈಗಾರಿಕೆಗಳಿಗೆ ಮರಗಳನ್ನು ಕೊಡುವ ಬದಲು ಸಿ.ಎನ್.ಡಿ. ಯಿಂದ ಈ ಕೈಗಾರಿಕೆಯವರಿಗೆ ಖಾಲಿ ಜಮೀನು ಕೊಟ್ಟು ಅವರೇ ಮರಗಳನ್ನು ಬೆಳೆಸಿಕೊಳ್ಳಬೇಕೆಂದು ಮತ್ತು ಅವರಿಗೆ ಬೇಕಾದಂತಹ ರಾ ಮೆಟೀರಿಯಲ್ ತಯಾರಿಸಿಕೊಳ್ಳುವುದಕ್ಕೆ ನಾವು ಅವರಿಗೆ ಖಾಲಿ ಜಮೀನನ್ನು ಮಾತ್ರ ಕೊಟ್ಟಿದ್ದೇವೆ. ಇದರಿಂದ ಕಾಡಿನ ಮೇಲೆ ಪರಿಣಾಮ ಸ್ವಲ್ಪ ಕಡಿಮೆಯಾಗುತ್ತದೆ.

ಶ್ರೀ ಕೆ. ಭಾಸ್ಕರನಾಯ್ಡು.—ಕೈಗಾರಿಕೆಯವರಿಗೆ ಸರ್ಕಾರದವರು ಮರಗಳನ್ನು ಸಪ್ಲೈ ಮಾಡು ತ್ತೇವೆ ಮತ್ತು ನಿಮಗೆ ಬೇಕಾದಂತಹ ರಾ ಮೆಟೀರಿಯಲ್ಸ್ ಸಪ್ಲೈ ಮಾಡುತ್ತೇವೆ ಎಂದು ಮಾಡಿ ಕೊಂಡಿರುವ ಒಪ್ಪಂದವನ್ನು ತಾವು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ? ಒಂದೊಂದು ಕರಾರು ಸುಮಾರು ೯೯ ವರ್ಷಗಳು ಮತ್ತು ೩೦–೪೦ ವರ್ಷಗಳು ಕರಾರು ಮಾಡಿಕೊಂಡರೆ ಇದು ಹೇಗೆ ಸಾಧ್ಯ? ಹಿಂದೆ ಮಾರುಕಟ್ಟೆಯಲ್ಲಿ ಒಂದು ಟನ್ ಸೌದೆಗ ೫೦ ರೂಪಾಯಿಗಳು ಇತ್ತು. ಆದರೆ ಈಗ ಒಂದು ಟನ್ ಸೌದೆ ೨೫೦ ರೂಪಾಯಿಗಳು ಆಗಿದೆ. ಆದ್ದರಿಂದ ನಿಮಗೆ ಇವರ ಮೇಲೆ ಏನು ಅಂತಹ ಪ್ರೇಮ ಮತ್ತು ವಾತ್ಸಲ್ಯ ಇದೆ ಎಂಬುದನ್ನು ನನಗೆ ಸ್ವಲ್ಪ ತಿಳಿಸುತ್ತೀರಾ.

ಶ್ರೀ ಬಿ. ಎ. ಮೊಹಿದ್ದೀನ್.—ಅರಣ್ಯ ಇಲಾಖೆ ಜಮೀನನ್ನು ಗ್ರಾಂಟ್ ಮಾಡುವುದಕ್ಕಾಗುವು ದಿಲ್ಲ. ಅದಕ್ಕಾಗಿ ಲೀಸ್ ಮೇಲೆ ಕೊಡುತ್ತಾರೆ.

ಶ್ರೀ ಕೆ. ಭಾಸ್ಕರನಾಯ್ಡು.—ಹೆಂಡ ಮತ್ತು ಸಾರಾಯಿಯನ್ನು ಪ್ರತಿವರ್ಷವೂ ಹರಾಜು ಮಾಡಲಾಗುತ್ತದೆ. ಇದರಿಂದ ವರ್ಷೇ ವರ್ಷೇ ಆದಾಯ ಜಾಸ್ತಿ ಬರುತ್ತಿದೆ. ಆದರೆ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಏತಕ್ಕೆ ಈ ರೀತಿ ಮಾಡುತ್ತೀರಿ? ಈಗ ಲೋಕೋಪಯೋಗಿ ಇಲಾಖೆ ಯಲ್ಲಿ ಕೆಲಸಗಳನ್ನು ಕಂಟ್ರಾಕ್ಟ್ ಕೊಟ್ಟ ಮೇಲೆ ಯಾವುದೇ ಸಮಯದಲ್ಲಿ ಬೇಕಾದರೂ ಆ ಕಂಟ್ರಾಕ್ಟನ್ನು ರದ್ದು ಮಾಡುವ ಬಗ್ಗೆ ಒಂದು ಕ್ಲಾಜ್ ಇದೆ. ಅದರಂತೆ ಇಲ್ಲಿಯೂ ಒಂದು ಕ್ಲಾಜ್ ಏನಾದರು ಇದೆಯೋ ಹೇಗೆ? ಇಲ್ಲದಿದ್ದರೆ ಅಂತಹ ಒಂದು ಕ್ಲಾಜ್ ಸೇರಿಸಲು ಪ್ರಯತ್ನ ಮಾಡುತ್ತೀರಾ ಅಥವಾ ಟನ್ ಸೌದೆಗೆ ೫೦ ರೂ. ನಂತೆಯೇ ಕೊಟ್ಟು ಅವರನ್ನು ಉದ್ಧಾರ ಮಾಡುತ್ತೀರಾ? ಈ ರೀತಿ ಅವರಿಗೆ ಅನುಕೂಲ ಮಾಡಿಕೊಟ್ಟು ಬಡವರಿಗೆ ಕಟ್ಟಿಗೆ ಇಲ್ಲದಂತೆ ಮಾಡುವುದು ಯಾವ ನ್ಯಾಯ?

ಶ್ರೀ ಜಿ. ಮಾದೇಗೌಡ.—ಅವರಿಗೆ ನಾವು ಬೆಳೆದಿರುವ ಕಾಡನ್ನು ಕೊಡುತ್ತಿಲ್ಲ. ಮರಗಳನ್ನು ಬೆಳೆಸಿಕೊಳ್ಳಲು ಖಾಲಿ ಜಾಗ ಕೊಡುತ್ತಿದ್ದೇವೆ.

ಶ್ರೀ ಕೆ. ಭಾಸ್ಕರನಾಯ್ಡು.—ಪುಟ ೧೫೮ರ ಕಡೆಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ. ಇಲ್ಲ 'Government are committed' ಎಂದು ಹೇಳಿದ್ದೀರಿ. ಇದು ಏತಕ್ಕೆ ಬೇಕು ? ಬಡವರಿಗೆ ಕಟ್ಟಿಗೆ ಕೊಡಿ ಎಂದು ಇಲ್ಲ ಎಂದು ಹೇಳುತ್ತೀರಿ. ಮತ್ತೆ ಪೇಜ್ ೧೮೮ರಲ್ಲಿ ಈ ರೀತಿ ಹೇಳಿದ್ದೀರಿ :

> "Government agrees to provide the company 190,000 tonnes per annum on assured basis......"

ಮತ್ತೆ ಪೇಜ್ ೨೨ ರಲ್ಲಿ ಈ ರೀತಿ ಹೇಳಿದ್ದೀರಿ :

> " Rosha grass is permitted to be collected from the forests by the Karnataka State Forest Industries Corporation, Bangalore on lease basis providing an annual revenue of Rs. 30,000... "

ಫಾಲ್‌ಫೈಬರ್ಸ್‌ನವರ ಜೊತೆ ೪೦ ವರ್ಷಗಳ ಅವಧಿವರೆಗೆ ಅಗ್ರಿಮೆಂಟ್ ಮಾಡಿಕೊಂಡಂತೆ ಇಲ್ಲಿಯೂ ಸಹ ಏತಕ್ಕೆ ಮಾಡಿಕೊಳ್ಳಲಿಲ್ಲ ? ೧೯೭೮ರ ನವೆಂಬರ್ ತಿಂಗಳಲ್ಲಿ ೩೦ ವರ್ಷಗಳವರೆಗೆ, ೪೦ ವರ್ಷಗಳವರೆಗೆ ಹಾಗೂ ೫೦ ವರ್ಷಗಳವರೆಗೆ ಟನ್ ಒಂದಕ್ಕೆ ೨೪ ರೂ. ಗಳ ಪ್ರಕಾರ ಕೊಡಲು ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ. ಆದರೆ ಇನ್ನೊಂದು ಕಡೆ ಬಡವರಿಗೆ ಕಟ್ಟಿಗೆ ಒದಗಿಸುವಾಗ ಟನ್‌ಗೆ ೨೫೦ ರೂ. ಗಳ ಪ್ರಕಾರ ಚಾರ್ಜ್ ಮಾಡುತ್ತೀರಿ. ಇದು ಯಾವ ನ್ಯಾಯ ? ಕಟ್ಟಿಗೆ ಅಭಾವ ಇರುವಾಗ ಇಂತಹ ಅಗ್ರಿಮೆಂಟ್ ಏತಕ್ಕೆ ಮಾಡಿಕೊಂಡಿದ್ದೀರಿ ? ಈಗಲಾದರೂ ಈ ಅಗ್ರಿಮೆಂಟ್‌ನ್ನು ರದ್ದು ಮಾಡಲು ತಯಾರಿದ್ದೀರಾ ? ಟಾಟಾ, ಬಿರ್ಲಾ ಅವರನ್ನು ಬಗಲಲಿ ಕೂರಿಸಿಕೊಂಡು ಇಂತಹ ಅಗ್ರಿಮೆಂಟ್ ಏತಕ್ಕೆ ಮಾಡಿಕೊಳ್ಳುತ್ತೀರಿ ? ಇದರ ಬದಲು ಒಂದೊಂದು ವರ್ಷಕ್ಕೆ ಎಂದು ಕಂಟ್ರಾಕ್ಟ್ ಕೊಡಿ. ಹರಾಜು ಮಾಡುವುದರ ಮೂಲಕ ಆಗ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಬರುತ್ತದೆ.

ಶ್ರೀ ಜಿ. ಮಾದೇಗೌಡ.—ಇದರಲ್ಲಿ ನಮ್ಮ ಸ್ವಾರ್ಥ ಏನೂ ಇಲ್ಲ. ಜೊತೆಗೆ ಇದು ನಮ್ಮ ಕಾಲದಲ್ಲಿ ಆದ ಅಗ್ರಿಮೆಂಟ್ ಅಲ್ಲ. ಇದು ಹಿಂದೆ ಆಗಿದೆ.

SRI K. BHASKAR NAIDU.—King is more loved. I am not bothered who has done this. Government is a continuous process.

ಶ್ರೀ ಜಿ. ಮಾದೇಗೌಡ.—ಅರಣ್ಯ ಆಧಾರಿತ ಕೈಗಾರಿಕೆಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಹಿಂದೆ ಇಂತಹ ಅಗ್ರಿಮೆಂಟ್ ಆಗಿದ್ದು ನಿಜ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿತ್ತು. ಇದನ್ನು ತಪ್ಪಿಸಲು ಈಗ ೨೪ ರೂ. ಗಳಿಂದ ೮೦೦ ರೂ. ಗಳಿಗೆ ಹೆಚ್ಚು ಮಾಡಿದ್ದೇವೆ. ಅದಕ್ಕಾಗಿ ತಾವು ನಮ್ಮ ಸರ್ಕಾರವನ್ನು ಕಾಂಪ್ಲಿಮೆಂಟ್ ಮಾಡಬೇಕು.

ಶ್ರೀ ಕೆ. ಭಾಸ್ಕರನಾಯ್ಡು.—೮೦೦ ರೂ. ಗಳಿಗೆ ಹೆಚ್ಚು ಮಾಡಿದ್ದರೆ ನಾನು ನಿಜವಾಗಿಯೂ ಕಾಂಪ್ಲಿಮೆಂಟ್ ಮಾಡುತ್ತೇನೆ.

ಶ್ರೀ ಜಿ. ಮಾದೇಗೌಡ—ಈ ರೀತಿ ಹೆಚ್ಚು ಮಾಡಿದ ಮೇಲೆ ಅವರು ಹೈಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ಕೇಸ್ ಪೆಂಡಿಂಗ್ ಇದೆ. ಒಟ್ಟಿನಲ್ಲಿ ದರವನ್ನು ರಿವಿಜನ್ ಮಾಡಿದ ಮೇಲೆ ಸರ್ಕಾರದ ಬೊಕ್ಕಸಕ್ಕೆ ೧೦ ಕೋಟಿ ರೂ. ಗಳಷ್ಟು ಹೆಚ್ಚಿನ ವರಮಾನ ಬರುತ್ತಿದೆ. ಈಗ ಮೈಸೂರು ಪೇಪರ್ ಮಿಲ್ ಏನಿದೆ, ಅದು ಸರ್ಕಾರದ್ದು. ಅದಕ್ಕೆ ಬೇಕಾದ ರಾ–ಮೆಟೀರಿಯಲ್ಸ್ ಕೊಡದಿದ್ದರೆ ಅದು ಮುಚ್ಚಿಹೋಗುತ್ತದೆ. ಈಗ ಅದಕ್ಕೆ ನಾವು ಕೋಟ್ಯಾಂತರ ರೂ ಗಳನ್ನು ಬಂಡವಾಳದ ರೂಪದಲ್ಲಿ ಹಾಕಿದ್ದೇವೆ. ಆದ್ದರಿಂದ ಇನ್ನು ಮುಂದೆ ರಾ–ಮೆಟೀರಿಯಲ್ಸ್‌ನ್ನು ನಾವು ಬೆಳೆದು ಕೊಡುವುದಕ್ಕಾಗುವುದಿಲ್ಲ, ನೀವೇ ಬೆಳೆಸಿಕೊಳ್ಳಿ ಎಂದು ಅವರಿಗೆ ಸಿ. ಅಂಡ್ ಡಿ. ರೆವಿನ್ಯೂ ಲ್ಯಾಂಡ್ ಕೊಟ್ಟಿದ್ದೇವೆ. ಈ ಜಮೀನಿನಲ್ಲಿ ರಾ–ಮೆಟೀರಿಯಲ್ಸ್‌ನ್ನು ಬೆಳೆಸಿದ ಮೇಲೆ ಸರ್ಕಾರಕ್ಕೆ ಇಷ್ಟು ರಾಯಲ್ಟಿ ಕೊಡಿ ಎಂದು ಅವರಿಗೆ ಹೇಳಿದ್ದೇವೆ.

ಇನ್ನು ವನಮಹೋತ್ಸವವನ್ನು ಚೆನ್ನಾಗಿ ಆಚರಿಸಬೇಕೆಂದುಕೊಂಡು ನರ್ಸರಿ ಮೂಲಕ ೪ ಕೋಟಿ ಸಸಿಗಳನ್ನು ಬೆಳೆಸಿ ಪುಕ್ಕಟೆಯಾಗಿ ಹಂಚುತ್ತಿದ್ದೇವೆ ಸಂಘ ಸಂಸ್ಥೆಗಳಿಗೆ ಪುಕ್ಕಟೆಯಾಗಿ ಕೊಡುತ್ತಿದ್ದೇವೆ. ಈ ಅರಣ್ಯ ಬೆಳೆಸುವ ಕಾರ್ಯಕ್ರಮ ಏನಿದೆ ಇದು ಕೇವಲ ಅರಣ್ಯ ಇಲಾಖೆಯಿಂದ ಮಾತ್ರ ಸಾಧ್ಯವಾಗುವುದಿಲ್ಲ. ಆದ್ದರಿಂದ ಎಲ್ಲಾ ಸಂಘ ಸಂಸ್ಥೆಗಳು, ಎಲ್ಲಾ ಇಲಾಖೆಗಳೂ ಶಾಲಾ ಕಾಲೇಜುಗಳು ಹಾಗೂ ಎಲ್ಲಾ ವರ್ಗದ ಜನರೂ ಇದರಲ್ಲಿ ಭಾಗವಹಿಸಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಬೆಂಗಳೂರಿನಲ್ಲಿ ಈ ವನಮಹೋತ್ಸವದ ಅಂಗವಾಗಿ ೪ ಲಕ್ಷ ಸಸಿಗಳನ್ನು ಹಂಚುವುದರ ಮೂಲಕ ಪಾಳು ಬಿದ್ದಿರುವ ಜಮೀನಿನಲ್ಲೆಲ್ಲಾ ಕಾಡನ್ನು ಬೆಳೆಸಬೇಕೆಂದು ಹೊರಟಿದ್ದೇವೆ.

ಶ್ರೀ ಕೆ. ಭಾಸ್ಕರ ನಾಯ್ಡು.—ನಾನು ಮಾನ್ಯ ಮಂತ್ರಿಗಳ ಗಮನವನ್ನು ವಾರ್ಷಿಕ ವರದಿಯ ಪುಟ ೧೫೨ರ ಕಡೆಗೆ ಸೆಳೆಯುತ್ತೇನೆ. ಇಲ್ಲಿ ಈ ರೀತಿ ಇದೆ :

> Government are committed to the supply of firewood to the extent of 20,000 tonnes per annum for manufacture of charcol and subsequent use in the manufacture of Ferrosilicon to M/s Sandur Manganes and Iron Ore Ltd.,.........

ಇದರ ಅರ್ಥವಾದರೂ ಏನು ? As long as India exists or as long as the world exists or as long as the Company exists. ಈ ಪ್ರಮಾಣದ ಕಟ್ಟಿಗೆಯನ್ನು ಎಲ್ಲಿಯ ವರೆಗೆ ಕೊಡುತ್ತೀರಿ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟ ವಿವರಣೆ ಕೊಡಬೇಕು. ಮುಂದೆ ಇಲ್ಲಿ Social forestry at Bellary and Bijapur ಎಂದು ಹೇಳಿದ್ದೀರಿ ಇದಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ತಿಳಿಬೇಕು.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿದ್ದೇನೆ. ನನ್ನಲ್ಲಿ ಲಿಸ್ಟ್ ಇದೆ. ಮೈಸೂರು ಪೇಪರ್ ಮಿಲ್ಸ್. ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್. ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ, ಟೈಲ್ಸ್ ಫ್ಯಾಕ್ಟರಿ, ಶುಗರ್ ಫ್ಯಾಕ್ಟರಿ. ಹರಿಹರ ಪಾಲಿಫೈಬರ್ಸ್– ಈ ಎಲ್ಲಾ ಕಂಪೆನಿಗಳಿಗೆ ಕೊಟ್ಟಿದ್ದೇವೆ. ಅದಕ್ಕೋಸ್ಕರ ಕಡಿಮೆ ರೇಟಿನಲ್ಲಿ ಕೊಟ್ಟಿದ್ದೇವೆ, ಸರ್ಕಾರಕ್ಕೆ ಲಾಸ್ ಆಗುತ್ತದೆ ಎನ್ನುವ ದೃಷ್ಟಿಯಿಂದ ರಿವಿಜನ್ ಆಫ್ ರೇಟ್‌ಮಾಡಿ ಜಾಸ್ತಿ ಮಾಡಿಕೊಟ್ಟಿದ್ದೇವೆ.

SRI K. BHASKAR NAIDU.—Sir, the Minister such an intelligent man that he is, is avoiding my question. Either I have not put my question properly or he has not understood it properly. He is avoiding my question itself. I am pointing out a particular institution. I want to know what is the rate of timber per cubic metre and for how many years the contract was entered into ? I want to know the particulars about this Institution because I am coming from Bellary.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಭಾಸ್ಕರನಾಯ್ಡು ಅವರು ಏನು ರೆಫರ್ ಮಾಡುತ್ತಾ ಇದ್ದಾರೆ ಆ ಇನ್‌ಸ್ಟಿಟ್ಯೂಷನ್‌ಗೆ ೩ ವರ್ಷಕ್ಕೆ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ. ಈ ಮೂರುವರ್ಷಗಳಲ್ಲಿ ಈ ವರ್ಷ ಮತ್ತು ಕಳೆದ ವರ್ಷ ಎರಡು ವರ್ಷಗಳು ಅವರು ಕೇಳಲಿಲ್ಲ, ನಾವು ಕೊಡಲಿಲ್ಲ. ಇನ್ನೊಂದು ವರ್ಷ ಆದರೆ ಮುಗಿದು ಹೋಗುತ್ತದೆ. ಮುಂದಕ್ಕೆ ಅಗ್ರಿಮೆಂಟ್ ರಿನ್ಯೂ ಮಾಡುವುದಕ್ಕೆ ನಮ್ಮ ಹತ್ತಿರ ಸೌದೆ ಇಲ್ಲ. ರಿನ್ಯೂ ಮಾಡುವುದಿಲ್ಲ ಎನ್ನತಕ್ಕ ಭರವಸೆಯನ್ನು ಮಾನ್ಯ ನಾಯ್ಡುರವರಿಗೆ ಕೊಡುತ್ತೇನೆ. ಇನ್ನೇನು ಬೇಕು ಸ್ವಾಮಿ.

SRI K. BHASKAR NAIDU.—I would like to know what is the cost per tonne ?

SRI G. MADEGOWDA.—At the time of agreement, the Government had agreed to supply timber at Rs. 96/- per tonne.

SRI K. BHASKAR NAIDU.—for this Sandur Co., the Forest Department is supplying timber at Rs. 96/- per tonne. But, the common man has to pay Rs. 300/- per tonne I wanted this particular thing which was covered and hidden by the Minister and the Government.

ಶ್ರೀ ಜಿ. ಮಾದೇಗೌಡ.—ಇವತ್ತು ೨೫೦ ರೂಪಾಯಿ ಆಗಿದೆ. ೩ ವರ್ಷಗಳಿಗೆ ನಾವು ಅಗ್ರಿಮೆಂಟ್ ಮಾಡಿದಾಗ ಅದೇ ರೇಟು ಇದ್ದದ್ದು. ಈ ವರ್ಷ ಜಾಸ್ತಿಯಾಗಿದೆ. ಆದಕ್ಕೋಸ್ಕರ ೩ ವರ್ಷಕ್ಕೆ ಅಗ್ರಿಮೆಂಟ್ ಮಾಡಿದೆ, ರೇಟ್ ಬದಲಾಯಿಸಿಲ್ಲ. ಎರಡು ವರ್ಷಗಳಿಂದ ಸಪ್ಲೈ ಮಾಡಿಲ್ಲ ಅಂದಮೇಲೆ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಮುಂದಿನ ವರ್ಷಕ್ಕೆ ಮುಗಿದು ಹೋಗುತ್ತದೆ, ಕೊಡುವುದಿಲ್ಲ ಎಂತಲೂ ನಾನು ಭರವಸೆ ಕೊಟ್ಟಿದ್ದೇನೆ. ಅಧ್ಯಕ್ಷರೆ, ಈ ವರ್ಷ ಬಹಳ ಮುಖ್ಯವಾದುದು ಅಂದರೆ ನಮ್ಮ ಬಜೆಟ್‌ನಲ್ಲಿ ಸುಮಾರು ೩೧ ಲಕ್ಷ ರೂಪಾಯಿಗಳ ಹರಿಜನ–ಗಿರಿಜನರಿಗೆ ಮತ್ತು ಕಾಡಿನಲ್ಲಿ ವಾಸಮಾಡತಕ್ಕವರಿಗೆ ಸ್ಪೆಷಲ್ ಯೋಜನೆ ಮಾಡಿದ್ದೇವೆ. ಅದರಲ್ಲಿ ಹರಿಜನರಿಗೆ. ರೇಷ್ಮೆ ಬೆಳೆಯತಕ್ಕ ಕೆಲಸಗಳಿಗೆ, ಸೊಸೈಟಿ ಮಾಡಿಕೊಳ್ಳುವುದಕ್ಕೆ, ಜೇನು ಸಾಕುವುದಕ್ಕೆ ಸಾಮಾಗ್ರಿಗಳನ್ನು ಕೊಳ್ಳುವುದಕ್ಕೆ, ಮರ ಕಟ್ ಮಾಡುವುದಕ್ಕೆ, ಅವರಿಗೆ ಮನೆ ಕಟ್ಟಿಸಿಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದು ಅತ್ಯಂತ ಮುಖ್ಯವಾದುದು. ಆಮೇಲೆ ಮತ್ತೊಂದು ಮುಖ್ಯವಾದ ವಿಷಯವೇನೆಂದರೆ, ಸ್ಕೂಲಿನ ಮಕ್ಕಳಿಗೆ ಅರಣ್ಯ ದರ್ಶನ ಮಾಡಿಸಬೇಕು ಎಂಬ ದೃಷ್ಟಿಯಿಂದ ವಿದ್ಯಾ ಇಲಾಖೆಯವರು ಮತ್ತು ನಮ್ಮ ಇಲಾಖೆಯವರು ಸೇರಿಕೊಂಡು ಒಂದು ವಿಶೇಷ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮತ್ತೆ ಟೌನುಗಳಲ್ಲಿ ಮತ್ತು ಪಟ್ಟಣಗಳಲ್ಲಿ ಮನೆ ಕಟ್ಟತಕ್ಕ ಜಾಗಗಳೇನಿವೆ ಅಲ್ಲಿ ಮನೆ ಕಟ್ಟುವುದಕ್ಕೆ ಲೈಸನ್ಸ್ ಕೊಡುವಾಗ ಪ್ರತಿಯೊಬ್ಬರೂ ಇಷ್ಟು ಗಿಡಗಳನ್ನು ಹಾಕಬೇಕು ಎನ್ನತಕ್ಕ ಕಾನೂನು ಮಾಡಿ ಖಾಲಿ ಬಿಡತಕ್ಕ ಜಮೀನುಗಳಲ್ಲಿ ಪ್ರತಿಯೊಬ್ಬರೂ ಕೂಡ ಎಕರೆ ಒಂದಕ್ಕೆ ಇಷ್ಟು ಗಿಡ ನೆಡಲೇಬೇಕು, ಇಲ್ಲದೇ ಹೋದರೆ ಪೀನಲೈಸ್ ಮಾಡುತ್ತೇವೆ ಎಂದು ಕಾನೂನನ್ನು ತಿದ್ದುಪಡಿ ಮಾಡಿ ಪ್ರತಿಯೊಬ್ಬರೂ ಮರಗಿಡಗಳನ್ನು ಬೆಳೆಯಬೇಕು ಎಂಬ ದೃಷ್ಟಿಯಿಂದ ಬಹಳವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಬಹುಶಃ ಅರಣ್ಯ ಬೆಳೆಸದೆ ದೇಶಕ್ಕೆ ಗಂಡಾಂತರ ಏನು ಬಂದಿದೆ ಏನು ವಾತಾವರಣ ಕೆಟ್ಟು ಹೋಗಿದೆ, ದರಿದ್ರ ಬಂದಿದೆ ಅದನ್ನು ನೀಗುವುದು ಒಬ್ಬರಿಂದ ಆಗತಕ್ಕ ಕೆಲಸವಲ್ಲ. ಮಾನ್ಯ ಸದಸ್ಯರುಗಳನ್ನು ಮತ್ತು ಸಾರ್ವಜನಿಕರು, ಅಧಿಕಾರ ವರ್ಗದವರು ಎಲ್ಲರೂ ಕೂಡ ಈ ಕಾರ್ಯದಲ್ಲಿ ಭಾಗಿಗಳಾಗಿ, ಈ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗಣಿ ವಿಷಯದಲ್ಲಿ ಹೆಚ್ಚಿಗೆ ಹೇಳಬೇಕಾದ ವಿಷಯವಿಲ್ಲ. ಗಣಿ ಮತ್ತು ಭೂಗರ್ಭದ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಕರ್ನಾಟಕ ರಾಜ್ಯ ಗಣಿಸಂಪತ್ತಿನಲ್ಲೂ ಕೂಡ ಉತ್ಕೃಷ್ಟವಾದಂಥ ಖನಿಜಸಂಪತ್ತನ್ನು ಹೊಂದಿರತಕ್ಕಂಥ ದೇಶ. ಆದಕ್ಕೋಸ್ಕರ ಭೂಗರ್ಭದಲ್ಲಿ ಅಡಗಿರತಕ್ಕಂಥ ಖನಿಜಗಳನ್ನು ಎಕ್ಸ್‌ಪ್ಲಾಯಿಟ್ ಮಾಡಿ ಹೊರದೇಶಕ್ಕೆ ಕಳಿಸತಕ್ಕಂಥಾದ್ದು ಮತ್ತು ಕೆಲವು ಖನಿಜಗಳನ್ನು ಇಲ್ಲೇ ನಾವು ಪ್ರೊಸೆಸ್ ಮಾಡತಕ್ಕ ಯೂನಿಟ್‌ಗಳಿವೆ. ಮಾನ್ಯ ಸದಸ್ಯರು ಚಿತ್ರದುರ್ಗ ಕಾಪರ್ ಕಂಪೆನಿಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ನಮ್ಮ ಗಮನದಲ್ಲಿ ಇದೆ. ಚಿತ್ರದುರ್ಗ ಕಾಪರ್ ಕಂಪೆನಿಯನ್ನು ಎಕ್ಸ್‌ಪಾಂಡ್ ಮಾಡತಕ್ಕ ಯೋಜನೆ ಇದೆ. ಇವತ್ತಿನ ದಿವಸ ಏನು ಗವರ್ನ್‌ಮೆಂಟ್ ಆಫ್ ಇಂಡಿಯಾ ಆರ್ಗನೈಸೇಷನ್ ಇದೆ ಆದರ ಮುಖಾಂತರ ಕನ್‌ಸಂಟ್ರೇಟನ್ನು ಮಾರಾಟ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ಮಸಿಯಪ್ಪನವರು ಹೇಳಿದ ರೀತಿಯಲ್ಲಿ ಈ ಕಾನ್ಸನ್‌ಟ್ರೇಟ್‌ಗೆ ಪ್ರೊಡಕ್ಷನ್ ಕಾಸ್ಟ್ ಎಷ್ಟಾಗಿದೆ ಅದಕ್ಕಿಂತ ಕಡಿಮೆ ಆಗುತ್ತಾ ಇರುವುದರಿಂದ ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲ. ಜಾಸ್ತಿ ಮಾಡುವುದಕ್ಕೆ ಆಗುತ್ತಾ ಇಲ್ಲ. ಈಗಾಗಲೇ, ಕೇಂದ್ರ ಸರ್ಕಾರದ ಮಂತ್ರಿಗಳು ಇಲ್ಲಿಗೆ ಬರುವವರಿದ್ದಾರೆ ಅವರ ಜೊತೆಯಲ್ಲಿ ಮಾತನಾಡುತ್ತೇವೆ, ಇದರ ಜೊತೆಗೆ ಡೆಲ್ಲಿಗೆ ಹೋದಾಗ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿ ನಮಗೆ ನ್ಯಾಯವಾದ ಲಾಭವನ್ನು ಪಡೆಯುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಮಾನ್ಯ ಮೊಹಿದ್ದೀನ್ ಸಾಹೇಬರು ಒಂದು ಮಾತನ್ನು ಹೇಳಿದರು. ಏನೆಂದರೆ, ಇವತ್ತಿನ ದಿವಸ ನಮ್ಮ ದೇಶದಲ್ಲಿರತಕ್ಕ ಖನಿಜ ಸಂಪತ್ತನ್ನು ನಾವು ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೇವೆ. ಈ ದೇಶದಲ್ಲೇ ಒಂದು ಕೈಗಾರಿಕೆ ಮಾಡಬೇಕು ಎಂದು ಹೇಳಿದರು. ಇದು ನಿಜವಾಗಲೂ ಒಳ್ಳೆಯ ಸಲಹೆ. ಆದರೆ ಇದಕ್ಕೆ ಹಣ ಬೇಕಾಗುತ್ತದೆ.

ಮತ್ತು ಟೆಕ್ನಿಕಲ್ ಗೈಡನ್ಸ್ ಬೇಕಾಗುತ್ತದೆ. ಅದಕ್ಕೋಸ್ಕರ ಮೈಸೂರು ಮಿನರಲ್ಸ್‌ನವರು ಕೆಲವು ಕೈಗಾರಿಕೆಗಳನ್ನು ತೆಗೆದುಕೊಂಡಿದ್ದಾರೆ. ಹಾರ್ಡ್‌ವೇರ್ ಪೈಪ್ ಮಾಡತಕ್ಕಂಥಾದ್ದು ಮತ್ತು ಬ್ಲಾಕ್ ಗ್ರಾನೇಟ್ ಹಾಗೂ ಪಿಂಕ್ ಗ್ರಾನೇಟನ್ನು ಪಾಲಿಷ್ ಮಾಡಿ ಹೊರಗಡೆ ದೇಶಕ್ಕೆ ಕಳಿಸತಕ್ಕಂಥಾದ್ದು ಮಾಡಿ ಕೋಟ್ಯಾಂತರ ರೂಪಾಯಿಗಳ ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡುತ್ತಾ ಇದ್ದಾರೆ. ಇದೇರೀತಿ ನಾಲ್ಕಾರು ಕೈಗಾರಿಕೆಗಳನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ನಾವು ಈಗಾಗಲೇ ಮೈಸೂರು ಮಿನರಲ್ಸ್‌ಗೆ ಹೇಳಿದ್ದೇವೆ. ಈಗಾಗಲೇ ಮೈಸೂರು ಮಿನರಲ್ಸ್ ಇದರಲ್ಲಿ ಒಂದು ಕೋಟಿ ರೂಪಾಯಿ ಲಾಭ ಚೆನ್ನಾಗಿ ಮಾಡಿಕೊಂಡು ಬಂದಿದೆ. ಹೀಗೆ ನನ್ನ ಈ ಎರಡು ಇಲಾಖೆಗಳು ಏನಿವೆ ಸರ್ಕಾರದ ಬೊಕ್ಕಸಕ್ಕೆ ಹಣವನ್ನು ಕೊಡತಕ್ಕಂಥ ಇಲಾಖೆಗಳು. ಈ ವರ್ಷ ಅರಣ್ಯ ಇಲಾಖೆಯಿಂದ ೪೦ ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸಕ್ಕೆ ಕೊಡುತ್ತಾ ಇದ್ದೇವೆ ಮತ್ತು ಗಣಿಯಿಂದ ಇವತ್ತಿನದಿವಸ ಎರಡು ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಸರ್ಕಾರದ ಬೊಕ್ಕಸಕ್ಕೆ ಕೊಡುತ್ತಾ ಇದ್ದೇವೆ. ಇವತ್ತಿನ ದಿವಸ ಗಣಿ ಮತ್ತು ಅರಣ್ಯ ಇಲಾಖೆಗಳು ಏನಿವೆ ಇವುಗಳಲ್ಲಿ ಒಂದು. ಪಾತಾಳದಲ್ಲಿರತಕ್ಕಂಥ ನೀರನ್ನು ಎತ್ತಿ ವ್ಯವಸಾಯ ಮಾಡತಕ್ಕಂಥಾದ್ದು. ಇನ್ನೊಂದು ಆಕಾಶದಲ್ಲಿರತಕ್ಕಂಥ ನೀರನ್ನು ಧರೆಗೆ ಇಳಿಸತಕ್ಕಂಥಾದ್ದು ಈ ಎರಡು ಇಲಾಖೆಗಳು. ಆಕಾಶದಲ್ಲಿರತಕ್ಕ ಮಳೆಯನ್ನು ಇಳಿಸತಕ್ಕಂಥ ಅರಣ್ಯ ಇಲಾಖೆ ಮತ್ತು ಪಾತಾಳದಲ್ಲಿರತಕ್ಕ ಗಂಗೆಯನ್ನು ಹೊರಗೆ ತಂದು ಈ ದೇಶದ ದಾರಿದ್ರ್ಯವನ್ನು ಹೋಗಲಾಡಿಸತಕ್ಕಂಥ ಪ್ರಾಮುಖ್ಯವಾದ ಒಂದು ಇಲಾಖೆಯಾಗಿದೆ. ನಾನು ಮಂಡಿಸಿರತಕ್ಕಂಥ ಈ ಪ್ರಾಮುಖ್ಯ ಇಲಾಖೆಯ ಬೇಡಿಕೆಗಳನ್ನು ಸರ್ವಾನುಮತದಿಂದ ಒಪ್ಪಿಗೆ ನೀಡಬೇಕಾಗಿ ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER.—The question is

"That the sums not exceeding the amounts mentioned in the list of demands inclusive of the sum granted 'on account' be granted to the Government to defray the charges which will come in course of payment during the finacial year for the period ending on the 31st day of march, 1982 in respect of Demand Nos 6 and 21."

The Motion was adopted and the Demands were granted.

(As ordered by the Deputy Speaker, the Demands voted are reproduced below).

DEMAND NO.—6

"That a sum not exceeding Rs. 2,24.31-000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Mines and Geology".

DEMAND NO.—21

"That a sum not exceeding Rs. 24-86-67-000 on Revenue Account and Rs. 4,60,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Forest".

MR. DEPUTY SPEAKER.—Now the House stands adjourned to meet at 9 a.m. on Monday.

(The House adjourned at Forty-five Minutes past One of the Clock to meet again at Nine of the Clock on Monday, the 13th July 1981.)